
19 ಸೆಪ್ಟೆಂಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 191 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಟೋಕಿಯೋದಲ್ಲಿ ಗುರುವಾರ ನಡೆದ ವಿಶ್ವ ಜಾವೆಲಿನ್ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಸಚಿನ್ ಯಾದವ್ ಅವರು ಅತ್ಯುತ್ತಮ ಪ್ರದರ್ಶನ ನೀಡಿ 4ನೇ ಸ್ಥಾನ ಪಡೆದರು.



ಸಿಹಿ ಸುದ್ದಿ ನೀಡಿದ ಕಿಚ್ಚ ಸುದೀಪ್ » 2



ಹೋಗುವವರನ್ನು ತಡೆಯಲ್ಲ : ಡಿ.ಕೆ.ಶಿವಕುಮಾರ್ » 3



ಸಿ, ಡಿ ಶ್ರೇಣಿಗೆ ಮೇಲ್ಪಟ್ಟವರ ಮುಂಬಡ್ತಿಗೆ ತರಬೇತಿ ಕಡ್ಡಾಯ » 4

## ಬೆಂಗಳೂರು- ಮಂಗಳೂರು ರೈಲು ಸಂಚಾರ ಮತ್ತಷ್ಟು ವಿಳಂಬ

• ಪ್ರಜೋದಯ ವರದಿ

**ಹಾಸನ:** ಬೆಂಗಳೂರು-ಮಂಗಳೂರು ಹಗಲು ವೇಳೆ ರೈಲು ಸಂಚಾರ ನವೆಂಬರ್1 ರಿಂದ ಆರಂಭವಾಗುತ್ತದೆ ಎನ್ನಲಾಗಿತ್ತಾದರೂ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ.



ಸಕಲೇಶಪುರ-ಸುಬ್ರಹ್ಮಣ್ಯ ರಸ್ತೆ ಘಾಟ್ ಮಾರ್ಗದಲ್ಲಿ ಕೈ ಗೊಂಡಿರುವ ರೈಲ್ವೆ ವಿದ್ಯುದೀಕರಣ (ಆರ್‌ಇ) ಕಾಮಗಾರಿ ವಿಳಂಬವಾಗಿರುವುದರಿಂದ ನಿಗದಿತ ಅವಧಿಯೊಳಗೆ ರೈಲುಗಳ ಪುನರಾರಂಭವಾಗುವ ಸಾಧ್ಯತೆ ಕಡಿಮೆ. 2025ರ ಮೇ 15 ರಂದು ನೈರುತ್ಯ ರೈಲ್ವೆಯು ಕಾಮಗಾರಿಗಾಗಿ ಜೂನ್ 1ರಿಂದ ನವೆಂಬರ್ 1ರವರೆಗೆ 154 ದಿನಗಳ ಕಾಲ ಬೆಂಗಳೂರು-ಮಂಗಳೂರು ಮತ್ತು ಬೆಂಗಳೂರು-ಕಾರವಾರ ಮಾರ್ಗಗಳಲ್ಲಿ ಹಗಲು ರೈಲು ಸಂಚಾರವನ್ನು ರದ್ದುಗೊಳಿಸಿತ್ತು.

ಈ ನಿರ್ಧಾರವು ಸಕಲೇಶಪುರ-ಸುಬ್ರಹ್ಮಣ್ಯ ಮಾರ್ಗದಲ್ಲಿ ಸುರಕ್ಷತಾ ಸಂಬಂಧಿತ ಕೆಲಸಗಳು ಮತ್ತು ವಿದ್ಯುದೀಕರಣ ಕಾಮಗಾರಿಗಾಗಿ ನಡೆಸುವ 4 ಗಂಟೆಗಳ ಲೈನ್ ಬ್ಲಾಕ್‌ಗೆ ಸಂಬಂಧಿಸಿದ್ದು, ಇದು ಹಗಲು ಸಮಯದಲ್ಲಿ ನಡೆಯುವ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಕಾಮಗಾರಿ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಸಾಗದಿರುವುದರಿಂದ ಈಗ ರೈಲ್ವೆ ಸಚಿವಾಲಯದಿಂದ ಬ್ಲಾಕ್ ಅವಧಿಯನ್ನು ವಿಸ್ತರಿಸುವ ಅನುಮತಿ ಕೋರಲಾಗಿದೆ.

# ಚುನಾವಣಾ ಆಯುಕ್ತರಿಂದಲೇ ಮತಗಳ್ಳರ ರಕ್ಷಣೆ


## ದೇಶದ ಜನರು ಕುತಂತ್ರ ಸಹಿಸುವುದಿಲ್ಲ -ರಾಹುಲ್ ಗಾಂಧಿ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕ ಸೇರಿ ದೇಶಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಚುನಾವಣಾ ಆಯೋಗ ಮುಂದಾಗಿರುವ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಯೋಗದ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಮತಗಳ್ಳರನ್ನು ರಕ್ಷಿಸುತ್ತಿದ್ದಾರೆಂದು ಆರೋಪಿಸಿದ್ದಾರೆ.

ದೇಶದಲ್ಲಿ ನಡೆದಿರುವ ಆಪಾದಿತ ಮತ ವಂಚನೆಯನ್ನು ಬಹಿರಂಗಪಡಿಸುವಲ್ಲಿ ಚುನಾವಣಾ ಆಯೋಗಕ್ಕಾಗಿ ಕೆಲಸ ಮಾಡುತ್ತಿರುವವರೇ ನನಗೆ ಸಹಾಯ ಮಾಡುತ್ತಿದ್ದಾರೆಂದು ಅವರು ಹೇಳಿದ್ದಾರೆ. ಮತಗಳ್ಳತನ ಬಹಿರಂಗಪಡಿಸುವಲ್ಲಿ ಆಯೋಗದ ಒಳಗಿನಿಂದ ಸಹಾಯ ಪಡೆಯಲು ಪ್ರಾರಂಭಿಸಿದ್ದೇವೆ. ಈ ಪ್ರಕ್ರಿಯೆ ನಿಲ್ಲುವುದಿಲ್ಲ. ದೇಶದ ಜನರು ಅದನ್ನು ಸಹಿಸುವುದಿಲ್ಲ. ಮತಗಳನ್ನು ಕದಿಯಲಾಗುತ್ತಿದೆ ಎಂದು ಯುವಕರು ಅರಿತ ನಂತರ, ಅವರ ಶಕ್ತಿ ಹೊರಹೊಮ್ಮುತ್ತದೆ ಎಂದಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತಗಳ್ಳರನ್ನು ರಕ್ಷಿಸುತ್ತಿದ್ದಾರೆ. ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರನ್ನು ಅಳಿಸುವ ಮತ್ತು ಸೇರಿಸುವಲ್ಲಿ ವಂಚನೆ ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಅವರಿಗೆ ಸಂಪೂರ್ಣವಾಗಿ ತಿಳಿದಿದೆ ಎಂದು ವಿವರಿಸಿದ್ದಾರೆ.



ಆಳಂದ ಕ್ಷೇತ್ರದಲ್ಲಿ ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಿರುವ ಪ್ರಕರಣದಲ್ಲಿ ಭಾಗಿಯಾದವರು ಯಾರು. ಯಾವ ಸ್ಥಳದಿಂದ ಈ ಕೃತ್ಯಗಳು ನಡೆದಿದ್ದವು ಎಂದು ಪತ್ತೆಹಚ್ಚಲು ತಾಂತ್ರಿಕ ಮಾಹಿತಿಗಳಾದ ಐಪಿ ಅಡ್ರೆಸ್, ಬಳಕೆಯಾದ ಡಿವೈಸ್ ಮತ್ತು ಒಟಿಪಿ ಪಡೆದವರ ವಿವರಗಳಿಗಾಗಿ ಸಿಐಡಿ ಕಡೆಯಿಂದ 18 ನಿರಂತರ ಮನವಿಗಳನ್ನು ಸಲ್ಲಿಸಿದ ಹೊರತಾಗಿಯೂ ಚುನಾವಣಾ ಆಯೋಗ ನೀಡದಿರಲು ಕಾರಣ ಅರ್ಥವಾಗುತ್ತಿಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

### 6,000 ಮತ ಕಳವು

ಕರ್ನಾಟಕದ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 6,000 ಹೆಸರುಗಳನ್ನು ಮತದಾರರ ಪಟ್ಟಿ ಯಿಂದ ತೆಗೆದುಹಾಕಲಾಗಿದೆ. ಭಾರತದಾದ್ಯಂತ ಮತದಾರರನ್ನು ಅಳಿಸಲು ವಿಶೇಷವಾಗಿ ದಲಿತರು, ಒಬಿಸಿ, ಆದಿವಾಸಿ, ಅಲ್ಪಸಂಖ್ಯಾತರು ಮತ್ತು ವಿರೋಧ ಪಕ್ಷವನ್ನು ಬೆಂಬಲಿಸುವವರನ್ನು ಗುರಿಯಾಗಿಸಲಾಗಿದೆ. ನಮ್ಮ ಆರೋಪಕ್ಕೆ ಸಂಬಂಧಿಸಿ ಶೇ. 100ರಷ್ಟು ಪುರಾವೆಗಳಿವೆ. ನಾನು ನನ್ನ ದೇಶ, ಸಂವಿಧಾನ ಮತ್ತು

» ನಾಲ್ಕನೇ ಪುಟದಲ್ಲಿ

### 18 ಬಾರಿ ಪತ್ರ ಬರೆದರೂ ಉತ್ತರವಿಲ್ಲ

ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಕ್ರಮವಾಗಿ ಅಳಿಸಿ ಹಾಕಲಾಗುತ್ತಿದೆ ಎನ್ನುವ ಆರೋಪ ಸಂಬಂಧ ದಾಖಲಾಗಿ ರುವ ದೂರುಗಳ ಬಗ್ಗೆ ಕರ್ನಾ ಟಕ ಸಿಐಡಿ ತನಿಖೆ ನಡೆಸುತ್ತಿದ್ದು, ಈ ಬಗ್ಗೆ ಮಾಹಿತಿ ಕೋರಿ 18 ತಿಂಗಳಿನಲ್ಲಿ 18 ಬಾರಿ ಚುನಾವಣಾ ಆಯೋಗಕ್ಕೆ ಪತ್ರ ಬರೆದರೂ, ಯಾವುದೇ ಮಾಹಿತಿ ನೀಡಿಲ್ಲವೆಂದು ರಾಹುಲ್ ಗಾಂಧಿ ಅವರು ಹೇಳಿದ್ದಾರೆ.

18 ತಿಂಗಳಲ್ಲಿ ಚುನಾವಣಾ ಆಯೋಗಕ್ಕೆ ಸಿಐಡಿಯು 18 ಪತ್ರಗಳನ್ನು ಕಳುಹಿಸಿದೆ. ಯಾವ ಪ್ರದೇಶದಿಂದ ಈ ಮತದಾರರ ಹೆಸರು ನೋಂದಣಿಯಾಗಿದೆ ಎಂಬುದಕ್ಕೆ ಪೂರಕವಾದ ಐಪಿ ವಿಳಾಸ ಹಾಗು ಅದಕ್ಕೆ ಬಳಸಿದ ಒಟಿಪಿ ಮಾಹಿತಿ ನೀಡುವಂತೆ ಸಿಐಡಿ ಆಯೋಗವನ್ನು ಕೇಳಿದೆ. ಆದರೆ ಆಯೋಗವು ಅದನ್ನು ನೀಡಿಲ್ಲವೆಂದು ಅವರು ದೂರಿದ್ದಾರೆ.

# ಬಾಗಿಲು ತೆರೆಯದ ಎಂಸಿಇ ಅಧ್ಯಕ್ಷರ ಕೊಠಡಿ

## ಮುಂದುವರಿದ ಗೊಂದಲ | ಇಂದು ತೀರ್ಪು ಪ್ರಕಟವಾಗುವ ಸಾಧ್ಯತೆ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರು ಯಾರೆಂಬ ಗೊಂದಲ ಮುಂದುವರಿದಿದ್ದು, ಸೆ.18ರ ಶುಕ್ರವಾರ ಎಲ್ಲಾ ಗೊಂದಲಗಳಿಗೆ ತೆರೆ ಬೀಳಲಿದೆ ಎಂದು ತಿಳಿದು ಬಂದಿದೆ.

13 ನಿರ್ದೇಶಕರ ಬೆಂಬಲದೊಂದಿಗೆ ಬಹುಮತ ತಮ್ಮ ಪರವಾಗಿದೆ ಎಂದು ವಾದಿಸಿದ್ದ ಅಶೋಕ್ ಹಾರನಹಳ್ಳಿ ಬಣದ ಬಿ.ಆರ್.ಗುರುದೇವ್ ಅವರೇ ಎಂಟಿಇಎಸ್ ಅಧ್ಯಕ್ಷರು ಎನ್ನಲಾಗಿತ್ತು. ಸೆ.17ರಂದು ಸಹಕಾರ ಸಂಘಗಳ ಉಪ ನಿಬಂಧಕರು ನೀಡಿದ್ದ ಅಭಿಪ್ರಾಯವನ್ನು ಆಧರಿಸಿ ಗುರುದೇವ್ ಅಧ್ಯಕ್ಷ, ಕಾರ್ಯದರ್ಶಿಯಾಗಿ ಜಿ.ಟಿ.ಕುಮಾರ್ ಹಾಗು ಖಜಾಂಚಿಯಾಗಿ ಎಸ್.ಜಿ.ಶ್ರೀಧರ್ ಅವರು ತಮ್ಮ ಆಯ್ಕೆಯನ್ನು ಘೋಷಿಸಿಕೊಂಡಿದ್ದರು.

ವಿರೋಧಿ ಬಣದ ಆರ್. ಟಿ. ದ್ಯಾವೇಗೌಡ ಅವರ ಗುಂಪು ಸಹಕಾರ ಸಂಘಗಳ ಉಪ ನಿಬಂಧಕರ ಅಭಿಪ್ರಾಯವನ್ನು ಪ್ರಶ್ನಿಸಿ ಜಿಲ್ಲಾ 6ನೇ ಸೆಷನ್ಸ್ ನ್ಯಾಯಾಲಯದ ಮೆಟ್ಟಿಲೇರಿದೆ.

ನಗರದ ಎಂ.ಜಿ.ರಸ್ತೆಯಲ್ಲಿರುವ ಅಧ್ಯಕ್ಷರ ಕೊಠಡಿಗೆ ಬೀಗ ಹಾಕಿರುವುದರಿಂದ ಸದ್ಯ ಎಂಟಿಇಎಸ್‌ಗೆ ಅಧ್ಯಕ್ಷ ಯಾರೆಂಬ ಗೊಂದಲ ಮುಂದುವರೆದಿದೆ. ಆರ್.ಟಿ.ದ್ಯಾವೇಗೌಡ ಬಣದವರು ಬೆಂಗಳೂರಿನಲ್ಲಿ ಬೀಡು ಬಿಟ್ಟಿದ್ದರೆ, ಬಿ.ಆರ್.ಗುರುದೇವ್ ಅವರು ನ್ಯಾಯಾಲಯದ ತೀರ್ಪಿಗಾಗಿ ಕಾಯುತ್ತಾ ನಗರದಲ್ಲೇ ಕಾದು ಕುಳಿತರು. ಮಧ್ಯಾಹ್ನ 2 ಗಂಟೆಗೆ ಆದೇಶ ಪ್ರಕಟವಾಗುವ ಸಾಧ್ಯತೆ ಇತ್ತಾದರೂ ಸಂಜೆಯಾದರೂ ಯಾವ ಮಾಹಿತಿ ಹೊರಬೀಳಲಿಲ್ಲ.



ಸಹಕಾರ ಸಂಘಗಳ ಉಪನಿಬಂಧಕರ ಆದೇಶ ಪ್ರಶ್ನಿಸಿ ಅವರು ನ್ಯಾಯಾಲಯ ಮೆಟ್ಟಿಲೇರಿದ್ದಾರೆ. ನಾವು ಕಾನೂನಿಗೆ ತಲೆ ಬಾಗುತ್ತೇವೆ. ಅವರ ರೀತಿ ಕಚೇರಿ ಕಾಯಲು ರೌಡಿಗಳನ್ನು ನೇಮಿಸಿಲ್ಲ. ಕಾನೂನು ಹೋರಾಟ ಮುಂದುವರಿಯಲಿದೆ.

-ಬಿ.ಆರ್.ಗುರುದೇವ್

### ಪೊಲೀಸರ ಸರ್ಪಗಾವಲು

ಸದ್ಯ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರ ಕೊಠಡಿಗೆ ಪೊಲೀಸರ ಸರ್ಪಗಾವಲು ಹಾಕಲಾಗಿದೆ. ಗುರುವಾರ ಇಡೀ ದಿನ ಆರ್.ಟಿ. ದ್ಯಾವೇಗೌಡ ಅವರ ಬಣದ ಕೆಲವು ನಿರ್ದೇಶಕರು ಹಾಗು ಬೆಂಬಲಿಗರು ಆವರಣದಲ್ಲೇ ಮೊಕ್ಕಾಂ ಹೂಡಿದ್ದರು. ಸಂಜೆ 6 ಗಂಟೆ ನಂತರ ಮುಖ್ಯ ಗೇಟ್‌ಗೆ ಬೀಗ ಹಾಕಿದ ಬಳಿಕ ಎಲ್ಲರೂ ತೆರಳಿದರು.

» ನಾಲ್ಕನೇ ಪುಟದಲ್ಲಿ

# ಎದೆಹಾಲು ಉಣಿಸಿದ ಸಾಕು ತಾಯಿಯನ್ನೇ ಕೊಂದ ಅಪ್ರಾಪ್ತ

## ಜಾವಗಲ್ ಹೋಬಳಿಯಲ್ಲಿ ಅಮಾನವೀಯ ಕೃತ್ಯ | ಬೆಚ್ಚಿ ಬೀಳಿಸಿದ ಘಟನೆ

• ಪ್ರಜೋದಯ ವರದಿ

**ಅರಸೀಕೆರೆ:** ಅನಾಥ ಮಗುವೆಂದು ತಾಯಿ ಸ್ಥಾನದಲ್ಲಿ ನಿಂತು ಎದೆಹಾಲು ಕುಡಿಸಿ ದೊಡ್ಡವನಾಗಿ ಮಾಡಿದ್ದಕ್ಕೆ ಪುತ್ರನೆಂಬ ಪಾಪಿ ಆಕೆಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಅಮಾನವೀಯ ಘಟನೆ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿದೆ.

ಜಾವಗಲ್ ಹೋಬಳಿ ನೀಲಗಿರಿ ಕಾವಲು ಗ್ರಾಮದ ಮೀನಾಕ್ಷಮ್ಮ (43) ಮೃತ ಪಟ್ಟಿದ್ದಾರೆ. ಸೆ.15 ರಂದು ಘಟನೆ ನಡೆದಿದ್ದು, ಆರೋಪಿ ಅಪ್ರಾಪ್ತನಾಗಿದ್ದಾನೆ. ಹೃದಯ ವಿದ್ರಾವಕ ಘಟನೆಯಿಂದ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ.

ನಾರಾಯಣ ಎಂಬುವವರು ಕಳೆದ ಹದಿನೇಳು ವರ್ಷಗಳ ಹಿಂದೆ ಆರು ತಿಂಗಳ ಅನಾಥ ಮಗುವನ್ನು ದತ್ತು ಪಡೆದಿದ್ದರು. ನಾರಾಯಣ ಅವರ ಪಕ್ಕದ ಮನೆ ಕೆಲಸ ಮಾಡಿಕೊಂಡಿದ್ದ ಸಮೀಪ ಊರಿನ ಮೀನಾಕ್ಷಮ್ಮ ಬಾಲ್ಯದಿಂದಲೂ ಅನಾಥ ಮಗುವಿನ ಆರೈಕೆ ಮಾಡಿಕೊಂಡಿದ್ದಳು. ಎದೆ ಹಾಲು ಕುಡಿಸಿ ದೊಡ್ಡವನಾಗಿ ಮಾಡಿದ್ದು, ಮಾತ್ರವಲ್ಲದೆ ಶಾಲೆಗೆ ಬಿಡುವುದು, ಕರೆದುಕೊಂಡು ಬರುವುದು ಸೇರಿ ಎಲ್ಲಾ ಕೆಲಸವನ್ನು ಆಕೆಯೇ ಮಾಡುತ್ತಿದ್ದರು. ತಂದೆ-ತಾಯಿ ಇಲ್ಲದ ಮಗುವಿನ ಮೇಲೆ ಆಕೆ ತೋರುತ್ತಿದ್ದ ಪ್ರೀತಿಗೆ ಅಕ್ಕಪಕ್ಕದ ಮನೆಯವರು ಮೆಚ್ಚುಗೆ ಸೂಚಿಸಿದ್ದರು. ಮೀನಾಕ್ಷಮ್ಮಳನ್ನೇ ಆತ ಅಮ್ಮ ಎಂದು ಕರೆಯುತ್ತಿದ್ದ. ಈಗ ಜಾವಗಲ್‌ನ ಕಾಲೇಜ್‌ನಲ್ಲಿ ಪಿಯುಸಿ ಓದುತ್ತಿದ್ದ. ಆದರೆ, ಸಾಕಿ ಸಲುಹಿದ ತಾಯಿಯ ಮೇಲೆ ಪೈಶಾಚಿಕ ಕೃತ್ಯ ಎಸಗಿರುವುದು ದಿಗ್ಭ್ರಮೆ ಮೂಡಿಸಿದೆ. ಕೌಟುಂಬಿಕ ಕಲಹದಿಂದ ಗಂಡನಿಂದ ದೂರವಿದ್ದ ಮೀನಾಕ್ಷಮ್ಮ ಹೆತ್ತ ಮಗ ಹಾಗು ಸೊಸೆಯೊಂದಿಗೆ ವಾಸವಿದ್ದರು. ಸೊಸೆ ಇತ್ತೀಚೆಗಷ್ಟೇ ಹೆರಿಗೆಗೆ ತವರು ಮನೆಗೆ ತೆರಳಿದ್ದರು. ಮಗ ದಿನೇಶ್ ಅರಸೀಕೆರೆಯ ಬಾರ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದಾನೆ.



### ಪೈಶಾಚಿಕ ಕೃತ್ಯದ ವಿವರ

18 ವರ್ಷಗಳಿಂದ ಒಂದೇ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮೀನಾಕ್ಷಮ್ಮ ಸೆ.15ರ ಸೋಮವಾರ ಬೆಳಿಗ್ಗೆ 9ರ ಸಮಯದಲ್ಲಿ ನಡೆದುಕೊಂಡು ಕೆಲಸಕ್ಕೆ ತೆರಳುತ್ತಿದ್ದರು. ನಿರ್ಜನ ಪ್ರದೇಶದಲ್ಲಿ ಹೋಗುತ್ತಿದ್ದಾಗ ದಿಢೀರ್ ಎದುರಾದ ಅಪ್ರಾಪ್ತ ಬಾಲಕ ಬಲವಂತವಾಗಿ ಪಕ್ಕದ ಶೆಡ್‌ಗೆ ಎಳೆದೊಯ್ದು ಅತ್ಯಾಚಾರ ಎಸಗಿ ದ್ದಾನೆ. ನಂತರ ಈ ವಿಚಾರ ಯಾರಿ ಗಾದರೂ ಗೊತ್ತಾದರೆ ತಾಯಿ ಸ್ಥಾನದಲ್ಲಿರುವ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಕೃತ್ಯ ಗೊತ್ತಾಗಿ ಸಮಸ್ಯೆಯಾಗುತ್ತದೆ ಎಂದು ಕಲ್ಲಿನಿಂದ ಮೀನಾಕ್ಷಮ್ಮ ಅವರ ಎದೆ ಹಾಗು ತಲೆಗೆ ಹೊಡೆದಿದ್ದಾನೆ. ನಂತರ ದೊಣ್ಣೆಯಿಂದ ಹೊಡೆದಿದ್ದಾನೆ. ಆತನಿಂದ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದೆ ಮೀನಾಕ್ಷಮ್ಮ ನರಳುತ್ತಾ ಪ್ರಾಣ ಬಿಟ್ಟಿದ್ದಾರೆ. ನಂತರ ಶವವನ್ನು ಗ್ರಾಮದ ಪವನ್ ಎಂಬುವವರ ಹುಣಸೆಮರದ ಕೆಳಗೆ ಎಸೆದು ಅಲ್ಲಿಂದ ನಾಪತ್ತೆಯಾಗಿದ್ದಾನೆ. ಆರೋಪಿಯು ಮೀನಾಕ್ಷಮ್ಮ ಅವರ ಬಳಿ ಇದ್ದ ಮೊಬೈಲ್ ತೆಗೆದುಕೊಂಡು ಹೋಗಿರುವುದು ತನಿಖೆಯಲ್ಲಿ ಗೊತ್ತಾಗಿದೆ.

### ನಾಪತ್ತೆ ಪ್ರಕರಣ ದಾಖಲು

ಸಂಜೆಯಾದರೂ ತಾಯಿ ಮನೆಗೆ ಬಾರದ ಹಿನ್ನಲೆಯಲ್ಲಿ ಎಲ್ಲಾ ಕಡೆ ಹುಡುಕಾಟ ನಡೆಸಿದ್ದ ಮಗ ದಿನೇಶ್ ಬಾಣಾವರ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದ. ಮಾರನೇ ದಿನ ಹುಣಸೆಮರದ ಕೆಳಗೆ ಅಪರಿಚಿತ ಶವ ಪತ್ತೆಯಾಗಿದೆ ಎಂಬ ವಿಚಾರ ತಿಳಿದು ಸ್ಥಳಕ್ಕೆ ಹೋಗಿ ನೋಡಿದಾಗ ಮೃತಪಟ್ಟಿರುವುದು ತಮ್ಮ ತಾಯಿ ಎನ್ನುವುದು ದಿನೇಶ್‌ಗೆ ಗೊತ್ತಾಗಿದೆ.

### ಅಂತ್ಯಕ್ರಿಯೆಗೆ ಬಂದಿದ್ದ ಆರೋಪಿ

ಸೆ.16 ರಂದು ಮೀನಾಕ್ಷಮ್ಮ ಅವರ ಅಂತ್ಯಕ್ರಿಯೆ ನಡೆಯುವ ಜಾಗಕ್ಕೆ ಆರೋಪಿಯು ಬಂದಿದ್ದ. ಆಗ ಆತನ ನಡವಳಿಕೆ ಮೇಲೆ ಸಂಶಯ ವ್ಯಕ್ತ ಪಡಿಸಿದ ಗ್ರಾಮದ ಪವನ್ ಮೃತರ ಪುತ್ರ ದಿನೇಶ್‌ಗೆ ಹೇಳಿದ್ದರು. ಸೋಮವಾರ ಬೆಳಿಗ್ಗೆ ದಾರಿಯಲ್ಲಿ ಮೀನಾಕ್ಷಮ್ಮ ಹಾಗು ಅಪ್ರಾಪ್ತ ಜಗಳವಾಡುತ್ತಿರುವುದನ್ನು ನಾನು ನೋಡಿದ್ದೇನೆಂದು ತಿಳಿಸಿದ್ದ. ಕೊಲೆಯ ಹಿಂದೆ ಅಪ್ರಾಪ್ತನ ಕೈವಾಡ ಇರುವುದಾಗಿ ದಿನೇಶ್ ಸಾವಿನ ತನಿಖೆ ನಡೆಸುವಂತೆ ದೂರು ನೀಡಿದ್ದರು. ದೂರು ಆಧರಿಸಿ ಜಾವಗಲ್ ಠಾಣೆ ಪೊಲೀಸರು ಅಪ್ರಾಪ್ತನನ್ನು ಬಂಧಿಸಿದ್ದರು.

ತನ್ನ ಮೇಲೆ ಸಂಶಯ ಬಂದಿರಬಹುದೆಂದು ಅರಿತಿದ್ದ ಅಪ್ರಾಪ್ತ ಊರು ಬಿಡಲು ನಿರ್ಧರಿಸಿದ್ದ. ಮೀನಾಕ್ಷಮ್ಮ ಅವರ ಮೊಬೈಲ್‌ನಲ್ಲಿದ್ದ ಸಿಮ್ ಕಾರ್ಡ್ ತೆಗೆದು ತನ್ನ ಸಿಮ್ ಹಾಕಿಕೊಂಡಿದ್ದ. ಲೋಕೇಶನ್ ನೆರವಿನಿಂದ ಕೆಲವೇ ಸಮಯದಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ವಿಚಾರಣೆ ವೇಳೆ ತಾನು ಮೀನಾಕ್ಷಮ್ಮ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಸೋಮವಾರ ಬೆಳಿಗ್ಗೆ ಮೀನಾಕ್ಷಮ್ಮ ಅವರಿಗೆ ಐದು ಬಾರಿ ಕರೆ ಮಾಡಿದ್ದನೆಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯನ್ನು ಬಾಲಾಪರಾಧಿಗಳ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಮೀನಾಕ್ಷಮ್ಮ ಅವರ ಕೊಲೆ ಘಟನೆಯಿಂದ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದು, ಆರೋಪಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದ್ದಾರೆ.

# ಶಾಲಾ-ಕಾಲೇಜು ತೊರೆದ ನೀಲಗಿರಿ ಕಾವಲು ಮಕ್ಕಳು

## ಕಾಲ್ನಡಿಗೆ ದಾರಿಯಲ್ಲಿ ಭಯದ ವಾತಾವರಣ | ಕುಗ್ರಾಮಕ್ಕೆ ಮೂಲ ಸೌಕರ್ಯ ಮರೀಚಿಕೆ

• ಪ್ರಜೋದಯ ವರದಿ

**ಹಾಸನ:** ಹೆತ್ತ ತಾಯಿಯಂತಿದ್ದ ಮಹಿಳೆಯನ್ನೇ ಕೊಂದಿರುವುದನ್ನು ನೆನಪು ಮಾಡಿಕೊಂಡರೆ ಭಯವಾಗುತ್ತದೆ. ವಿದ್ಯಾಭ್ಯಾಸ ಮೊಟಕಾದರೂ ಚಿಂತೆ ಇಲ್ಲ, ಊರಿಗೆ ಸರ್ಕಾರಿ ಬಸ್ ಬರುವವರೆಗೆ ನಾವು ಮಾತ್ರ ಕಾಲೇಜಿಗೆ ಹೋಗುವುದಿಲ್ಲ...

ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿ ನೀಲಗಿರಿ ಕಾವಲು ಗ್ರಾಮದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳ ಆತಂಕದ ನುಡಿಗಳಿವು. ಅಪ್ರಾಪ್ತನಿಂದ 43 ವರ್ಷದ ಮಹಿಳೆ ಕೊಲೆಯಾದ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಯಾವ ಮಕ್ಕಳು ಶಾಲೆ-ಕಾಲೇಜಿಗೆ ಹೋಗುತ್ತಿಲ್ಲ. ಏಕೆಂದರೆ ಬಸ್ ಹತ್ತಲು ಆ ಮಕ್ಕಳು ನಿತ್ಯ 3 ಕಿ.ಮೀ. ನಡೆದುಕೊಂಡು ಹೋಗಬೇಕು. ಘಟನೆಯೂ ಅದೇ ರಸ್ತೆಯಲ್ಲಿ ನಡೆದಿರುವುದರಿಂದ ಭಯದ ವಾತಾವರಣ ನಿರ್ಮಾಣವಾಗಿದೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಈ ಹಿಂದೆಯೂ ಶಾಲಾ-ಕಾಲೇಜಿಗೆ ಹೋಗುತ್ತಿದ್ದ ಹೆಣ್ಣು ಮಕ್ಕಳನ್ನು ಚುಡಾಯಿಸುತ್ತಿದ್ದ ಎಂದು ಗ್ರಾಮಸ್ಥರು ಕಿಡಿಕಾರಿದ್ದಾರೆ.



### ಸೌಕರ್ಯಗಳಿಲ್ಲದ ಗ್ರಾಮ

160 ಕ್ಕೂ ಹೆಚ್ಚು ಕುಟುಂಬಗಳನ್ನು ಒಳಗೊಂಡಿರುವ ನೀಲಗಿರಿ ಗ್ರಾಮ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ. ಬಂದೂರು ಗೇಟ್‌ನಿಂದ ಊರಿಗೆ ಸಂಪರ್ಕಿಸುವ 3 ಕಿ.ಮೀ. ರಸ್ತೆ ಸಂಪೂರ್ಣ ಗುಂಡಿ ಬಿದ್ದಿದ್ದು, ಯಾವ ವಾಹನಗಳು ಸಂಚರಿಸುವಂತಿಲ್ಲ. ತುರ್ತು ಸಮಯದಲ್ಲಿ ಊರಿಗೆ ಆ್ಯಂಬುಲೆನ್ಸ್ ಸಹ ಬರಲು ಸಾಧ್ಯವಾಗದಷ್ಟು ರಸ್ತೆ ಹದಗೆಟ್ಟಿದೆ. ಗ್ರಾಮದಲ್ಲಿ ಸುಡಗಾಡು ಸಿದ್ಧ ಸಮುದಾಯದ 25, ಭೋವಿ 40, ಲಂಬಾಣಿ 15, ಕೊರಚರ 10 ಹಾಗು ಇತರೆ ಸಮುದಾಯದ 50 ಮನೆಗಳಿವೆ. ಕೃಷಿ ಹಾಗು ಕೂಲಿ ಕೆಲಸವನ್ನೇ ನಂಬಿರುವ ಗ್ರಾಮಸ್ಥರು ಆಧುನಿಕ ಪ್ರಪಂಚದಿಂದ ತೀರಾ ಹಿಂದುಳಿದಿದ್ದಾರೆ. ನ್ಯಾಯಬೆಲೆ ಅಂಗಡಿ ಇಲ್ಲದೆ ಪಡಿತರಕ್ಕಾಗಿ 5 ಕಿ.ಮೀ. ದೂರದ ಹಂದ್ರಾಳು ಗ್ರಾಮಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ.

### ಶಿಥಿಲಾವಸ್ಥೆ ತಲುಪಿದ ಶಾಲೆ

ನೀಲಗಿರಿ ಕಾವಲು ಗ್ರಾಮದಲ್ಲಿ ಪೂರ್ವ ಪ್ರಾಥಮಿಕ ಶಾಲೆ ಇದೆಯಾದರೂ ಇದ್ದು ಇಲ್ಲದಂತಾಗಿದೆ. ಆರ್ಥಿಕ ಸ್ಥಿತಿವಂತರು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿದ್ದಾರೆ. ಬಡವರ 25 ಮಕ್ಕಳು ಶಾಲೆಯಲ್ಲೇ ವ್ಯಾಸಂಗ ಮುಂದುವರಿಸಿದ್ದಾರೆ. ಆದರೆ, ಶಾಲಾ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ತಲುಪಿರುವುದಿಂದ ಯಾವಾಗ ಕುಸಿಯುತ್ತದೆಯೋ ಎಂಬ ಆತಂಕ ಕಾಡುತ್ತಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಶಿಕ್ಷಕರು ಶಾಲೆ ಆವರಣದಲ್ಲೇ ಕೂರಿಸಿ ಪಾಠ ಮಾಡುತ್ತಿದ್ದಾರೆ. ಸ್ವಲ್ಪ ಮಳೆ-ಗಾಳಿ ಬಂದರೂ ಆ ದಿನದ ತರಗತಿ ಇಲ್ಲ ಎನ್ನುವಂತಹ ಪರಿಸ್ಥಿತಿ ಇದೆ. ಕೊಠಡಿಗಳ ಛಾವಣಿ ಕುಸಿದಿದೆ, ಬಾಗಿಲುಗಳು ಮುರಿದಿವೆ. ಮಕ್ಕಳಿಗೆ ಶೌಚಾಲಯ, ಕುಡಿಯುವ ನೀರಿನ

» ನಾಲ್ಕನೇ ಪುಟದಲ್ಲಿ

ನೀಲಗಿರಿ ಗ್ರಾಮಸ್ಥರು ಅನುಭವಿಸುತ್ತಿರುವ ನೋವು ಹೇಳತೀರದಾಗಿದೆ. ಶಿಕ್ಷಣ ಪಡೆಯಬೇಕೆಂದು ಎಲ್ಲರೂ ಭಾಷಣ ಮಾಡುತ್ತಾರೆ. ಕಲಿಕೆಗೆ ಪೂರಕ ವಾತಾವರಣವಿಲ್ಲ, ನಿತ್ಯ ಭಯದ ದಾರಿಯಲ್ಲೇ ಸಾಗಬೇಕು. ಇನ್ನಾದರೂ ಮೂಲಸೌಕರ್ಯ ಕಲ್ಪಿಸಲು ಕ್ರಮ ವಹಿಸಬೇಕು.

-ಭರತ್, ಗ್ರಾಮಸ್ಥ

## ಲೋಕಾಯುಕ್ತ ಬಲೆಗೆ ಗ್ರಾಮ ಲೆಕ್ಕಾಧಿಕಾರಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪೌತಿ ಖಾತೆ ಮಾಡಿಕೊಡಲು ರೈತರೊಬ್ಬರಿಂದ 3 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ತಾಲ್ಲೂಕಿನ ಹಳ್ಳಿಮೈಸೂರು ನಾಡಕಚೇರಿಯ ಗ್ರಾಮ ಲೆಕ್ಕಾಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.



ಗ್ರಾಮ ಲೆಕ್ಕಾಧಿಕಾರಿ ರಮೇಶ್ ಬಂಧಿತ ಆರೋಪಿ. ಮುದ್ದೇಗೌಡ ಎಂಬುವವರಿಗೆ ಪೌತಿ ಖಾತೆ ಮಾಡಿಕೊಡಲು 4 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಸೆ.16 ರಂದು 1 ಸಾವಿರ ರೂ. ನೀಡಿದ್ದ ಮುದ್ದೇಗೌಡ ಉಳಿದ ಹಣವನ್ನು ಗುರುವಾರ ನೀಡುವುದಾಗಿ ಒಪ್ಪಿದ್ದರು. ಈ ಸಂಬಂಧ ಮುದ್ದೇಗೌಡ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ನಾಡ ಕಚೇರಿಯಲ್ಲಿ ಬಾಕಿ 3,000 ರೂ. ಲಂಚ ಪಡೆಯುತ್ತಿದ್ದಾಗಲೇ ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಇನ್ಸ್‌ಪೆಕ್ಟರ್‌ಗಳಾದ ಶಿಲ್ಪಾ, ಚಂದ್ರಶೇಖರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ತನಿಖೆ ಮುಂದುವರಿದಿದೆ.

## ಸ್ನೇಹಿತೆಯರ ಜೊತೆಗಿನ ವಿಡಿಯೋ ವೈರಲ್: ಯುವಕ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ನಗರದ ಮಹಾರಾಜ ಪಾರ್ಕ್‌ನಲ್ಲಿ ಕಾಲೇಜು ಸ್ನೇಹಿತೆಯರೊಂದಿಗೆ ಕುಳಿತಿದ್ದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದರಿಂದ ಮನನೊಂದ ವಿದ್ಯಾರ್ಥಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಕಲ್ಲೇನಹಳ್ಳಿಯಲ್ಲಿ ಗುರುವಾರ ನಡೆದಿದೆ.

ತಾಲ್ಲೂಕಿನ ಮೊಸಳೆಹೊಸಳ್ಳಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಬಿಎ ಅಂತಿಮ ವರ್ಷದಲ್ಲಿ ಓದುತ್ತಿದ್ದ ಕೆ.ಪವನ್ (21) ಮೃತ ದುರ್ದೈವಿ. ಬುಧವಾರ ನಗರಕ್ಕೆ ಬಂದಿದ್ದ ಪವನ್ ತನ್ನ ಇಬ್ಬರು ಸ್ನೇಹಿತೆಯರೊಂದಿಗೆ ಪಾರ್ಕ್‌ನ ಆಸನದ ಮೇಲೆ ಕುಳಿತಿದ್ದ. ಮೂವರು ಹುಡುಗಾಟ ಮಾಡುತ್ತಾ ಕುಳಿತಿದ್ದ ದೃಶ್ಯವನ್ನು ದೂರದಿಂದ ಮಹಿಳೆಯೊಬ್ಬರು ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು.



ಸಾರ್ವಜನಿಕ ಸ್ಥಳಗಳಲ್ಲಿ ಹೀಗೆ ಕರ್ಮಕಾಂಡ ಮಾಡಿಕೊಂಡು ಕುಳಿತಿದ್ದಾರೆ. ಸಣ್ಣ ಮಕ್ಕಳು ಓಡಾಡುವ ಜಾಗದಲ್ಲಿ ಹೇಗಿರಬೇಕೆಂಬ ಪರಿಜ್ಞಾನ ಇಲ್ಲವೇ. ಇಂತಹವರಿಗೆ ಏನು ಮಾಡಬೇಕು. ನಮ್ಮ ಸಮಾಜ ಯಾವ ಸ್ಥಿತಿ ತಲುಪಿದೆ ನೋಡಿ. ಮಹಿಳೆ ರೀಲ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆ ಮಾಡಿದ್ದರು.

ಈ ವಿಡಿಯೋ ಪವನ್‌ನ ಸ್ನೇಹಿತರಿಗೂ ಸಿಕ್ಕಿತ್ತು. ಅದರಿಂದ ಮನನೊಂದ ಆತ ಎಲ್ಲರಿಗೂ ಕರೆ ಮಾಡಿ ಡಿಲೀಟ್ ಮಾಡುವಂತೆ ಗೋಗರೆದಿದ್ದ. ಪರಿಸ್ಥಿತಿ ವಿಕೋಪಕ್ಕೆ ತಿರುಗಿದ್ದರಿಂದ ಮನನೊಂದು ತಮ್ಮ ಮನೆಯ ಕೊಟ್ಟಿಗೆಯಲ್ಲಿ ನೇಣು ಬಿಗಿದುಕೊಂಡಿದ್ದಾನೆ. ಬಡ ಕುಟುಂಬದ ಪವನ್ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ. ತಾಯಿ ಮನೆಗೆಲಸ ಮಾಡಿಕೊಂಡು ಆತನನ್ನು ಬೆಳೆಸಿದ್ದರೆನ್ನಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದಸರಾ ಉದ್ಘಾಟಕರ ಆಯ್ಕೆ: ಸುಪ್ರೀಂನಲ್ಲಿಂದು ಚರ್ಚೆ

• ಪ್ರಜೋದಯ ವರದಿ

**ನವದೆಹಲಿ:** ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ. ಅರ್ಜಿ ವಿಚಾರಣೆಗೆ ಕೋರ್ಟ್ ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರ ಅವರ ಪೀಠದ ಮುಂದೆ ಅರ್ಜಿಯ ವಿಚಾರಣೆ ಬಂದಿದೆ. ಸೆ.22 ರಂದು ದಸರಾ ಪ್ರಾರಂಭವಾಗುವುದರಿಂದ ತುರ್ತು ವಿಚಾರಣೆಗೆ ಅರ್ಜಿದಾರರು ಕೋರಿದರು. ಮಾನ್ಯ ಮಾಡಿರುವ ನ್ಯಾಯಾಲಯ ಸೆ.19ರಂದು ವಿಚಾರಣೆಗೆ ಪಟ್ಟಿ ಮಾಡಿದೆ.

ಸೆ.22ರಂದು ಹಿಂದೂಯೇತರ ವ್ಯಕ್ತಿಯೊಬ್ಬರಿಗೆ ಕರ್ನಾಟಕದ ಮೈಸೂರು ದೇಗುಲದಲ್ಲಿ ಚಾಮುಂಡೇಶ್ವರಿ ಉತ್ಸವಕ್ಕೂ ಮುನ್ನ ನಡೆಸುವ ಅಗ್ರ ಪೂಜೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಬೇಕೆಂದು ಅರ್ಜಿದಾರರ ಪರ ವಕೀಲರು ಭಿನ್ನವಿಸಿಕೊಂಡರು. ಅದಕ್ಕೆ ಸಿಜೆಐ ಒಪ್ಪಿದರು.

ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸುವುದನ್ನು ವಿರೋಧಿಸಿ ಬಿಜೆಪಿ ನಾಯಕ ಪ್ರತಾಪ ಸಿಂಹ ಸೇರಿ ಕೆಲವು ಮಂದಿ ಸಲ್ಲಿಸಿದ್ದ ಪಿಐಎಲ್ ಅನ್ನು ಸೆ. 15ರಂದು ಕರ್ನಾಟಕ ಹೈಕೋರ್ಟ್ ತಿರಸ್ಕರಿಸಿತ್ತು.

### ಶ್ರವಣಬೆಳಗೊಳ ಜೈನ ಮಠದಲ್ಲಿ ಅರ್ಥಪೂರ್ಣ ಕಾರ್ಯಕ್ರಮ | ಸಾಹಿತ್ಯಾಸಕ್ತರ ಸಮಾಗಮ

# ಗಾಯಕ ಜನ್ನಿ-ಶೂದ್ರ ಶ್ರೀನಿವಾಸ್‌ಗೆ ಡಾ.ಸಿದ್ದಲಿಂಗಯ್ಯ ದತ್ತಿ ಪ್ರಶಸ್ತಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರವಣಬೆಳಗೊಳದ ಚಾವುಂಡರಾಯ ಸಭಾಂಗಣದಲ್ಲಿ ಗುರುವಾರ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನಿಂದ ಡಾ.ಸಿದ್ದಲಿಂಗಯ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

ಜೈನ ಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ 2024ನೇ ಸಾಲಿನ ದತ್ತಿ ಪ್ರಶಸ್ತಿಯನ್ನು ಜನಮನದ ಜನ್ನಿ ಎಂದೇ ಖ್ಯಾತರಾದ ಮೈಸೂರಿನ ಗಾಯಕ ಹೆಚ್.ಜನಾರ್ಧನ್, 2025ನೇ ಸಾಲಿನ ಪ್ರಶಸ್ತಿಯನ್ನು ಬೆಂಗಳೂರಿನ ಶೂದ್ರ ಶ್ರೀನಿವಾಸ್ ಅವರಿಗೆ ಶಾಸಕ ಸಿ.ಎನ್.ಬಾಲಕೃಷ್ಣ ಅವರು ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜನ್ನಿ ಅವರು, ಈ ದೇಶದಲ್ಲಿ ಅವಕಾಶ ಇಲ್ಲದವರನ್ನು, ಜಾತಿ ಹೆಸರಿನಲ್ಲಿ, ನಿರುದ್ಯೋಗಿಗಳನ್ನು ತುಳಿಯುವುದು ನಿಂತಿಲ್ಲವೆಂದು ಬೇಸರ ವ್ಯಕ್ತಪಡಿಸಿ, ಡಾ.ಸಿದ್ದಲಿಂಗಯ್ಯ ಹೆತ್ತವರು, ನನ್ನ ತಂದೆ-ತಾಯಿ ಎಲ್ಲರೂ ಜೀತ ಮಾಡಿದವರು. ಸಿದ್ದಲಿಂಗಯ್ಯ ದಿವ್ಯ ಪ್ರಕಾಶವಾಗಿ ಈ ನಾಡಿನಲ್ಲಿ ಬೆಳಗಿದವರು. ನಾನೇನೂ ದೊಡ್ಡ ಹಾಡುಗಾರ ಅಲ್ಲ. ಆದರೆ, ಸಿದ್ದಲಿಂಗಯ್ಯ ಅವರ ಕವಿತೆಯಲ್ಲಿದ್ದ ಹರಿತವಾದ ವಿಚಾರಗಳು ಅಂದರೆ ಹಸಿವಿನಿಂದ ಸತ್ತವರು, ಸೈಜುಗಲ್ಲು ಹೊತ್ತವರು, ಒದೆಸಿಕೊಂಡು ಒರಗಿದೋರು ನನ್ನ ಜನಗಳು ಎಂಬ ಸಾಲುಗಳು ನನ್ನನ್ನು ಗಾಯಕನನ್ನಾಗಿ ಮಾಡಿದವೆಂದರು.



ಶೂದ್ರ ಶ್ರೀನಿವಾಸ್ ಅವರು ಮಾತನಾಡಿ, ಸಿದ್ದಲಿಂಗಯ್ಯ ಅವರ ಹೆಸರಿನ ಪ್ರಶಸ್ತಿಯನ್ನು ಪಡೆದಿರುವುದು ನನ್ನ ಬದುಕಿನಲ್ಲಿ ತುಂಬಾ ಸಂತೋಷದ ವಿಷಯ. 50 ವರ್ಷ ಮೇಲ್ಪಟ್ಟು ನಾವೆಲ್ಲಾ ಒಟ್ಟಿಗೆ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇವೆ. ಸಿದ್ದಲಿಂಗಯ್ಯ ಅವರ ಹೊಲೆ ಮಾದಿಗರ ಹಾಡು ಕವಿತೆಗಳನ್ನು ಶೂದ್ರ ಪತ್ರಿಕೆಯಲ್ಲಿ ಪ್ರಕಟಿಸುವಾಗ ಲಂಕೇಶ್ ಅವರು ಏನಾದರೂ ತೊಂದರೆ ಆದೀತು ಹುಷಾರು ಎಂದು ಎಚ್ಚರಿಸಿದ್ದರು. ಏಕೆಂದರೆ ಕವಿತೆಯ ನುಡಿ ತೀವ್ರ, ತೀಕ್ಷ್ಣವಾಗಿದ್ದವು. ಅದೇ ವೇಳೆಗೆ ಬಸವಲಿಂಗಪ್ಪ

» ನಾಲ್ಕನೇ ಪುಟದಲ್ಲಿ

### ಕನ್ನಡಾಂಬೆ ಭುವನೇಶ್ವರಿಗೆ ಗೌರವಿಸಿ

ಎಲ್ಲರೂ ಅಂತರಂಗದಲ್ಲಿ ಕನ್ನಡಕ್ಕೆ ತಾಯಿಯ ಸ್ಥಾನ ಕೊಡಬೇಕು. ಜಾತಿ, ಮತ, ಪಂಥ ಬೇಧ ತೊರೆದು ಕನ್ನಡಾಂಬೆ ಭುವನೇಶ್ವರಿಗೆ ಗೌರವಿಸಬೇಕು, ಕನ್ನಡ ಭಾಷೆ ಉಳಿಸಬೇಕೆಂದು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾ ಚಾರ್ಯ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಹೇಳಿದರು. ಕನ್ನಡದ ಕುರಿತು ನಕಲಿ ಹೋರಾಟಗಳನ್ನು ಬಿಟ್ಟು ಭಾಷೆ ಉಳಿವು ಬೆಳವಣಿಗೆಗೆ ಶ್ರಮಿಸಬೇಕು. ಕನ್ನಡದ ಸೈನಿಕರಾದ ಜನಾರ್ದನ್ (ಜನ್ನಿ) ಹಾಗು ಶೂದ್ರ ಶ್ರೀನಿವಾಸ್ ಅವರನ್ನು ಈ ದಿನ ಸಿದ್ದಲಿಂಗಯ್ಯ ಅವರ ಸಾಹಿತ್ಯ ದತ್ತಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ. ಮುಂದಿನ ದಿನಗಳಲ್ಲಿ ಇಬ್ಬರ ಹೆಸರಿನಲ್ಲಿಯೂ ದತ್ತಿ ಪ್ರಶಸ್ತಿ ನೀಡುವಂತಾಗಲಿ. ನಮ್ಮ ಗುರುಗಳು 81ನೇ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಆಚರಿಸಿರುವುದನ್ನು ಕೇಳಿ ತಿಳಿದುಕೊಂಡಿದ್ದೇವೆ. ಅವರ ಗುರುಗಳು ಕೂಡ 67ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶ್ರವಣಬೆಳಗೊಳದಲ್ಲಿ ನಡೆಸಿಕೊಟ್ಟಿದ್ದಾರೆಂದರು.

ನಮ್ಮ ಅವಧಿಯಲ್ಲಿ ಕೂಡ ಮುಂದಿನ ದಿನಗಳಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವ ಶಕ್ತಿಯನ್ನು ಕ್ಷೇತ್ರದ ಆದಿ ದೇವತೆಗಳು ದಯಪಾಲಿಸಲಿ. ಕನ್ನಡದ ಸೇವೆ ಮಾಡುವ ಅವಕಾಶ ದೊರಕಲಿ ಎಂದರು.

## ಬಾಣಾವರ ಪಿಡಿಓ ಪೊಲೀಸ್ ವಶಕ್ಕೆ

• ಪ್ರಜೋದಯ ವರದಿ

ಹಾಸನ: ಪ್ರಧಾನ ಮಂತ್ರಿ ವಸತಿ ಯೋಜನೆಯಡಿ 93 ನಕಲಿ ಫಲಾನುಭವಿಗಳಿಗೆ ಹಣ ಹಾಕಿದ ಪ್ರಕರಣ ಸಂಬಂಧ ಅರಸೀಕೆರೆ ತಾಲ್ಲೂಕು ಬಾಣಾವರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ ಅವರನ್ನು ಅರಸೀಕೆರೆ ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಪಿಡಿಓ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಜಾಮೀನು ಪಡೆಯುವುದಕ್ಕಾಗಿ ಕುಮಾರ ಸ್ವಾಮಿ ಪೊಲೀಸರ ಕಣ್ತಪ್ಪಿಸಿ ಓಡಾಡಿಕೊಂಡಿದ್ದರು. ಬುಧವಾರ ನಗರದಲ್ಲಿರುವುದನ್ನು ಖಚಿತಪಡಿಸಿಕೊಂಡ ಡಿವೈಎಸ್‌ಪಿ ಬಿ.ಆರ್.ಗೋಪಿ ಅವರ ತಂಡ ಅಧಿಕಾರಿಯನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎನ್ನಲಾಗಿದೆ.

ಅವ್ಯವಹಾರದ ಸೂತ್ರಧಾರ, ಯೋಜನೆ ನೋಡಲ್ ಅಧಿಕಾರಿಯಾಗಿದ್ದ ಎಂ.ಕೆ.ರಾಜೇಶ್‌ನನ್ನು ಪೊಲೀಸರು ಅರಸೀಕೆರೆ ನಗರದ ಖಾಸಗಿ ಲಾಡ್ಜ್‌ನಲ್ಲಿ ಇತ್ತೀಚೆಗೆ ಬಂಧಿಸಿದ್ದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸೇರಿ ಉನ್ನತಾಧಿಕಾರಿಗಳ ಲಾಗಿನ್ ದುರುಪಯೋಗ ಮಾಡಿಕೊಂಡು ಬಾಣಾವರ ಗ್ರಾಮ ಪಂಚಾಯಿತಿಯ 93 ಸೇರಿ 347 ಜನರ ಖಾತೆಗೆ ತಲಾ 30 ಸಾವಿರ ರೂ.ಹಣ ಸಂದಾಯ ಮಾಡಿದ್ದ ಆರೋಪ ಇವರ ಮೇಲಿದೆ.

E-mail : prajodayahsn@gmail.com

ಪ್ರಜೋದಯ

19 ಸೆಪ್ಟೆಂಬರ್ 2025 ಶುಕ್ರವಾರ

# ಸಿನಿ ಪ್ರಪಂಚ



# ಸಿಹಿ ಸುದ್ದಿ ನೀಡಿದ ಕಿಚ್ಚ ಸುದೀಪ್

## ಮಾರ್ಕ್ ಚಿತ್ರ ಬಿಡುಗಡೆಗೆ ದಿನಾಂಕ ನಿಗದಿ

2024ರಲ್ಲಿ ಸುದೀಪ್ ಜೊತೆ ಮ್ಯಾಕ್ಸ್ ಚಿತ್ರವನ್ನು ನಿರ್ದೇಶಿಸಿದ್ದ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಮಾರ್ಕ್ ಚಿತ್ರಕ್ಕಾಗಿ ಮ್ಯಾಕ್ಸ್ ಚಿತ್ರದ ತಾಂತ್ರಿಕ ತಂಡವೇ ಒಂದಾಗಿದೆ. ನಟ ಕಿಚ್ಚ ಸುದೀಪ್ ಅಭಿನಯದ ಬಹುನಿರೀಕ್ಷಿತ ಆ್ಯಕ್ಷನ್ ಡ್ರಾಮಾ ಮಾರ್ಕ್ ಬಿಡುಗಡೆಗೆ ಈಗಾಗಲೇ ಅಭಿಮಾನಿಗಳು ಕಾಯುತ್ತಿದ್ದು, ಚಿತ್ರ ಬಿಡುಗಡೆ ಕುರಿತು ಹೊಸ ಅಪ್ಡೇಟ್ ಲಭ್ಯವಾಗಿದೆ. ಡಿಸೆಂಬರ್ 25ರಂದು ಮಾರ್ಕ್ ಚಿತ್ರವು ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆ ಯಾಗಲಿದೆ ಎನ್ನುವ ಸುಳಿವು ಸಿಕ್ಕಿದೆ.

ಸುದೀಪ್ ಅವರ ಇತ್ತೀಚಿನ ಅಪ್‌ಡೇಟ್‌ನ ಬೆನ್ನಲ್ಲೇ ಈ ಘೋಷಣೆ ಬಂದಿದ್ದು, ಚಿತ್ರದ ಒಂದು ಲಿರಿಕಲ್ ಟ್ರ್ಯಾಕ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಅದ್ಭುತವಾಗಿ ಸಂಗೀತ ಸಂಯೋಜನೆ ಮಾಡಿದ್ದಾರೆ ಮತ್ತು ಶೋಬಿ ಮಾಸ್ಟರ್ ನೃತ್ಯ ಸಂಯೋಜನೆ ಸುಂದರವಾಗಿ ಮಾಡಿದ್ದಾರೆ. ಚಿತ್ರೀಕರಣ ಮಾಡುವಾಗ ನನಗೆ ತುಂಬಾ ಸಂತೋಷವಾಯಿತು. ಹಾಡು ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ಸುದೀಪ್ ಎಕ್ಸ್‌ನಲ್ಲಿ ಹಂಚಿಕೊಂಡಿದ್ದು, ಅಭಿಮಾನಿಗಳಲ್ಲಿ ಉತ್ಸಾಹ ಕೆರಳಿಸಿದೆ.

2024ರಲ್ಲಿ ಸುದೀಪ್ ಜೊತೆ ಮ್ಯಾಕ್ಸ್ ಚಿತ್ರವನ್ನು ನಿರ್ದೇಶಿಸಿದ್ದ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಮಾರ್ಕ್ ಚಿತ್ರಕ್ಕಾಗಿ ಮ್ಯಾಕ್ಸ್ ಚಿತ್ರದ ತಾಂತ್ರಿಕ ತಂಡವೇ ಒಂದಾಗಿದೆ. ಸತ್ಯ ಜ್ಯೋತಿ ಫಿಲ್ಮ್ಸ್ ಬೆಂಬಲಿತ ಈ ಚಿತ್ರವು ಬಹು ಭಾಷೆಗಳಲ್ಲಿ ಬಿಡುಗಡೆಯಾಗಲಿದ್ದು, ನಿಶ್ವಿಕಾ ನಾಯ್ಡು ಮತ್ತು ರೋಶನಿ ಪ್ರಕಾಶ್ ಕೂಡ ತಂಡದ ಭಾಗವಾಗಿದ್ದಾರೆ. ಸುದೀಪ್ ಅವರ ಹುಟ್ಟುಹಬ್ಬದಂದು ಬಿಡುಗಡೆಯಾದ ಮೊದಲ ಪೋಸ್ಟರ್ ಭಾರಿ ಕುತೂಹಲ ಮೂಡಿಸಿದ್ದು, ಕ್ರಿಸ್‌ಮಸ್ ಬಿಡುಗಡೆಗಾಗಿ ನಿರೀಕ್ಷೆಗಳು ಹೆಚ್ಚಿವೆ.

**ಕಿಚ್ಚ ಸುದೀಪ್ ನಟನೆಯ ಚಿತ್ರದ ಟೈಟಲ್ ಟೀಸರ್:** ಮಾರ್ಕ್ ಚಿತ್ರದ ಬಿಡುಗಡೆಗೆ ಎದುರು ನೋಡುತ್ತಿರುವ ಕಿಚ್ಚ ಸುದೀಪ್ ಸದ್ಯ ಅನೂಪ್ ಭಂಡಾರಿ ಜೊತೆ ಬೃಹತ್ ಪ್ಯಾನ್-ಇಂಡಿಯಾ ಚಿತ್ರ ಬಿಲ್ಲಾ ರಂಗ ಭಾಷಾದಲ್ಲಿ ಬ್ಯುಸಿಯಾಗಿದ್ದಾರೆ. ಇದರೊಂದಿಗೆ ತಮ್ಮ ನಿರ್ದೇಶನದ ಯೋಜನೆಯೊಂದಿಗೆ ಮತ್ತೆ ತೆರೆ ಮೇಲೆ ಬರಲು ಎದುರು ನೋಡುತ್ತಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಮೋಸ್ಟ್ ಎಕ್ಸ್‌ಪೆಕ್ಟೆಡ್ ಸಿನಿಮಾ ಕಾಂತಾರ ಚಾಪ್ಟರ್ 1 ರಿಲೀಸ್‌ಗೆ ವೇದಿಕೆ ರೆಡಿಯಾಗುತ್ತಿದೆ. ಈ ಸಿನಿಮಾ ರಿಲೀಸ್‌ಗೂ ಮುನ್ನವೇ ಕನ್ನಡದಲ್ಲಿ ಕೆಲವು ಸಿನಿಮಾಗಳು ಓಟಿಟಿ ಹಾಗೂ ಥಿಯೇಟರ್‌ನಲ್ಲಿ ಬಿಡುಗಡೆಗೆ ಸಿದ್ಧವಾಗಿದೆ. ಇವುಗಳಲ್ಲಿ ಕೆಲವು ಸಿನಿಮಾಗಳು ಗಮನ ಸೆಳೆಯುತ್ತಿವೆ. ಸೆಂಟಿಮೆಂಟ್, ಥ್ರಿಲ್ಲರ್‌ಗಳು ಈ ಸಿನಿಮಾಗಳು ಬಿಡುಗಡೆಯಾಗುತ್ತಿವೆ.

ಈ ವರ್ಷದ ಮೊದಲ ಹಿಟ್ ಸಿನಿಮಾ ಕೂಡ ಇದೇ ವಾರ ಬಿಡುಗಡೆಯಾಗುತ್ತಿದೆ. ಮಾತೊಂದು ಹೇಳುವೆ, ರಾಜವರ್ಧನ್ ಹಾಗೂ ಸಂಗೀತಾ ಭಟ್ ನಟಿಸಿರುವ ಕಮಲ ಶ್ರೀದೇವಿ ನಟಿಸಿರುವ ಸಿನಿಮಾ ರಿಲೀಸ್ ಆಗುತ್ತಿವೆ. ಯಾವ್ಯಾವ ಓಟಿಟಿಯಲ್ಲಿ ಯಾವ್ಯಾವ ಸಿನಿಮಾ ರಿಲೀಸ್ ಆಗುತ್ತಿದೆ? ಅನ್ನೋದನ್ನು ತಿಳಿಯುವುದಕ್ಕೆ ಮುಂದೆ ಓದಿ.

**ಮಾದೇವ ಓಟಿಟಿ ರಿಲೀಸ್:** ಈ ವರ್ಷ ಕನ್ನಡ ಚಿತ್ರರಂಗದ ಮೊದಲ ಹಿಟ್ ಸಿನಿಮಾ ಮಾದೇವ. ವಿನೋದ್ ಪ್ರಭಾಕರ್, ಸೋನಾಲ್ ಮಾಂಟೇಲ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾ ಸೆಪ್ಟೆಂಬರ್ 19ರಂದು ಓಟಿಟಿಗೆ ಲಗ್ಗೆ ಇಡುತ್ತಿದೆ. ಈ ಸಿನಿಮಾ ಆಗಸ್ಟ್ ತಿಂಗಳಿನಲ್ಲಿಯೇ ಓಟಿಟಿಗೆ ಲಗ್ಗೆ ಇಡಬೇಕಿತ್ತು. ಆದರೆ, ಅಂದುಕೊಂಡ ಡೇಟ್‌ಗೆ ಆಗಿಲ್ಲ. ಹೀಗಾಗಿ ಸಿನಿ ಬಜಾರ್ ಓಟಿಟಿ ವೇದಿಕೆಯಲ್ಲಿ ಮಾದೇವ ರಿಲೀಸ್ ಆಗಲಿದೆ.

# ಈ ವಾರ ಓಟಿಟಿ-ಥಿಯೇಟರ್ ಲಗ್ಗೆ ಇಡುತ್ತಿರುವ ಸಿನಿಮಾಗಳು....

**ಮಾತೊಂದ ಹೇಳುವೆ:** ಮಾತೊಂದು ಹೇಳುವೆ ಇದೊಂದು ಹಾರ್ಟ್ ಟಚಿಂಗ್ ಲವ್ ಸ್ಟೋರಿ. ಆರ್‌ಜೆ ಆಗಿದ್ದ ಮಯೂರ್ ಉತ್ತರ ಕರ್ನಾಟಕದಲ್ಲಿ ಹುಟ್ಟಿಕೊಳ್ಳುವ ಲವ್ ಸ್ಟೋರಿಯನ್ನು ತೆರೆಮೇಲೆ ತಂದಿದ್ದಾರೆ. ಈ ಸಿನಿಮಾ ಮಯೂರ್ ಆರ್‌ಜೆಯಾಗಿ, ಬಳಿಕ ಡೇಟಿಂಗ್ ಅಡ್ವೈಸರ್ ಆಗಿ ನಟಿಸಿದ್ದಾರೆ. ಒಮ್ಮೆ ಮೈಸೂರಿನ ಯುವತಿ ಖುಷಿಯನ್ನು ಭೇಟಿ ಮಾಡಿ, ಆಕೆಯ ಪ್ರೀತಿಯಲ್ಲಿ ಬೀಳುತ್ತಾರೆ. ಆದರೆ, ಆಕೆ ಇದ್ದಕ್ಕಿಂತ ಕಾಣೆಯಾಗುತ್ತಾಳೆ. ಅವಳನ್ನು ಹುಡುಕಿಕೊಂಡು ಹೋಗುವುದೇ ಸಿನಿಮಾ. ಇದು ಸನ್ ನೆಕ್ಸ್ಟ್‌ನಲ್ಲಿ ಸೆಪ್ಟೆಂಬರ್ 19ರಿಂದ ಸ್ಟ್ರೀಮಿಂಗ್ ಆಗಲಿದೆ.

**ಕಮಲ್ ಶ್ರೀದೇವಿ:** ಇನ್ನು ಈ ವಾರ ಚಿತ್ರಮಂದಿರಲ್ಲಿ ಕಮಲ್ ಶ್ರೀದೇವಿ ಸಿನಿಮಾವನ್ನು ನೋಡಬಹುದು. ಸಚಿನ್ ಚೆಲುವರಾಯ ಸ್ವಾಮಿ, ಸಂಗೀತಾ ಭಟ್, ಕಿಶೋರ್, ರಮೇಶ್ ಇಂದಿರಾ, ಮಿತ್ರಾ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಶ್ರೀದೇವಿ ಎಂಬ ಯುವ ಮರ್ಡರ್ ಮಿಸ್ಟರಿಯನ್ನು ಭೇದಿಸುವ ಸಿನಿಮಾವಿದು. 7 ಪ್ರಮುಖ ಪಾತ್ರಗಳನ್ನು ಇಟ್ಕೊಂಡು ಈ ಕತೆಯನ್ನು ಹೆಣೆಯಲಾಗಿದೆ. ಪ್ರತಿಯೊಂದು ಪಾತ್ರವೂ ಆಗಾಗ ಬೇರೆ ಬೇರೆ ಟ್ವಿಸ್ಟ್ ಅನ್ನು ನೀಡುತ್ತಾ ಹೋಗುತ್ತೆ. ಇದು ಸೆಪ್ಟೆಂಬರ್ 19ರಂದು ರಿಲೀಸ್ ಆಗುತ್ತಿದೆ.

**ರೂಮ್ ನಂ 111:** ಧರ್ಮ ಕೀರ್ತಿರಾಜ್, ಅಪೂರ್ವ, ಗರಿಮಾ ಸಿಂಗ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಸಿನಿಮಾ ರೂಮ್ ನಂ 111. ಈ ಸಿನಿಮಾ ಸೆಪ್ಟೆಂಬರ್ 19ರಂದು ರಿಲೀಸ್ ಆಗುತ್ತಿದೆ. ಕಾರ್ತಿಕ್, ದಿವ್ಯಾ ಹಾಗೂ ಅವರ ಮಗು ಸಿನಿಮಾದ ಪ್ರಮುಖ ಪಾತ್ರಗಳು. ಒಂದು ಅಪಘಾತದಲ್ಲಿ ಕಾರ್ತಿಕ್ ಹಾಗೂ ಮಗು ಸಾವನ್ನಪ್ಪುತ್ತಾರೆ. ಆದರೆ, ಆಕ್ಸಿಡೆಂಟ್ ಅಷ್ಟೇ ಅಲ್ಲ ಅನ್ನೋದನ್ನು ಅರಿತ ದಿವ್ಯಾ ರಹಸ್ಯವನ್ನು ಭೇದಿಸುವುದಕ್ಕೆ ಹೊರಡುತ್ತಾಳೆ. ಇದು ಸಿನಿಮಾ ಒಂದೆಳೆ ಕಥೆ.





# ಮಾರುತಗೆ ನಾನು ಹೀರೋ ಅಲ್ಲ.. ಸುಮ್ಮನೆ ನಾಯಕ ಅನ್ನಬೇಡಿ; ದುನಿಯಾ ವಿಜಯ್

ಎಸ್.ನಾರಾಯಣ್ ನಿರ್ದೇಶಿಸಿ, ಕೆ.ಮಂಜು ಹಾಗೂ ರಮೇಶ್ ಯಾದವ್ ನಿರ್ಮಿಸಿರುವ ಮಾರುತ ಸಿನಿಮಾದ ರಿಲೀಸ್ ಡೇಟ್ ಅನೌನ್ಸ್ ಆಗಿದೆ. ಈ ಸಿನಿಮಾದಲ್ಲಿ ದುನಿಯಾ ವಿಜಯ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇವರೊಂದಿಗೆ ನಿರ್ಮಾಪಕ ಗಂಡುಗಲಿ ಕೆ.ಮಂಜು ಅವರ ಪುತ್ರ ಶ್ರೇಯಸ್ ಮಂಜು ಕೂಡ ನಟಿಸಿದ್ದಾರೆ. ಕೆಲವು ದಿನಗಳಿಂದ ಮಾರುತ ಸಿನಿಮಾದ ಪೋಸ್ಟ್‌ಗಳಲ್ಲಿ ದುನಿಯಾ ವಿಜಯ್ ಅವರೇ ಹೈಲೈಟ್ ಆಗಿದ್ದರು.



ಪೋಸ್ಟ್‌ಗಳನ್ನು ನೋಡಿವರಿಗೆ ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಲೀಡ್ ರೋಲ್‌ನಲ್ಲಿ ನಟಿಸಿದ್ದಾರೆಂದು ಭಾವಿಸಲಾಗಿತ್ತು. ಆದ್ರೀಗ ದುನಿಯಾ ವಿಜಯ್ ಮಾರುತ ಸಿನಿಮಾಗೆ ನಾನು ಹೀರೋ ಅಲ್ಲ ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಇತ್ತೀಚೆಗಷ್ಟೇ ಎಸ್.ನಾರಾಯಣ್ ನಿರ್ದೇಶಿಸಿರುವ ಈ ಸಿನಿಮಾದ ರಿಲೀಸ್ ಡೇಟ್ ಕೂಡ ಅನೌನ್ಸ್ ಆಗಿತ್ತು. ಇದೇ ಅಕ್ಟೋಬರ್ 31ರಂದು ಸಿನಿಮಾ ಬಿಡುಗಡೆಯಾಗುವುದಾಗಿ ಚಿತ್ರ ತಂಡ ಹೇಳಿ ಕೊಂಡಿತ್ತು. ಸದ್ಯ ದುನಿಯಾ ವಿಜಯ್ ತಮಿಳು ಸಿನಿಮಾ ಮುಕುತಿ ಅಮ್ಮನ್ 2 ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಇತ್ತ ಮಾರುತ ಸಿನಿಮಾ ರಿಲೀಸ್ ಅನೌನ್ಸ್ ಆಗುತ್ತಿದ್ದಂತೆ ದುನಿಯಾ ವಿಜಯ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆಂದು ಭಾವಿಸಲಾಗಿತ್ತು. ಈಗ ಈ ಗೊಂದಲಗಳಿಗೆ ವಿಜಯ್ ತೆರೆ ಎಳೆದಿದ್ದಾರೆ. ಈ ಸಿನಿಮಾ ಒಪ್ಪಿಕೊಂಡಿದ್ದು ಯಾಕೆ? ಅನ್ನೋದನ್ನು ರಿವೀಲ್ ಮಾಡಿದ್ದಾರೆ.

**ನಾಯಕ ನಾನಲ್ಲ.. ನಾನಲ್ಲ**

ದುನಿಯಾ ವಿಜಯ್ ಎರಡು ಬ್ಯಾಕ್ ಟು ಬ್ಯಾಕ್ ಹಿಟ್ ಕೊಟ್ಟು ಯಶಸ್ಸಿನ ಹಾದಿಯಲ್ಲಿ ಸಾಗುತ್ತಿದ್ದಾರೆ. ಸಲಗ ಹಾಗೂ ಭೀಮ ಎರಡೂ ಸಿನಿಮಾಗಳು ವಿಜಯ್‌ಗೆ ಚಿತ್ರರಂಗದಲ್ಲಿ ಮರುಜೀವ ಕೊಟ್ಟಿವೆ. ಹೀಗಾಗಿ ಚಿತ್ರರಂಗದಲ್ಲಿ ಸೂಪರ್ ಆಕ್ಟಿವ್ ಆಗಿದ್ದರೂ, ಲೆಕ್ಕ ಹಾಕಿ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಕನ್ನಡದಲ್ಲಿ ಮಗಳಿಗಾಗಿ ಅವರೇ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಮತ್ತೊಬ್ಬ ಮಗಳೊಂದಿಗೆ ಸ್ಕ್ರೀನ್ ಶೇರ್ ಮಾಡುತ್ತಿದ್ದಾರೆ. ಈ ಗ್ಯಾಪ್‌ನಲ್ಲಿಯೇ ತಮಿಳು ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಇಷ್ಟು ಬೆಳವಣಿಗಳ ಮಧ್ಯೆ ಮಾರುತ ಕೂಡ ರಿಲೀಸ್‌ಗೆ ರೆಡಿಯಾಗಿದೆ. ಆದರೆ, ಈ ಸಿನಿಮಾಗೆ ನಾನು ಹೀರೋ ಅಲ್ಲ ಎಂದು ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

**ಎಸ್.ನಾರಾಯಣ್-ಕೆ.ಮಂಜುಗಾಗಿ ಸಿನಿಮಾ**

ಮಾರುತ ಸಿನಿಮಾದಲ್ಲಿ ನಾನು ನಾಯಕ ಅಲ್ಲ ಅಂತ ದುನಿಯಾ ವಿಜಯ್ ಸ್ಪಷ್ಟನೆ ಕೊಟ್ಟಿದ್ದಾರೆ. ನಿರ್ಮಾಪಕ ಕೆ.ಮಂಜು ಹಾಗೂ ನಿರ್ದೇಶಕ ಎಸ್. ನಾರಾಯಣ್ ಅವರ ಮೇಲೆ ಅಪಾರ ಅಭಿಮಾನ ಮತ್ತು ಗೌರವವಿದೆ. ಈ ಕಾರಣಕ್ಕೆ ಮಾರುತ ಸಿನಿಮಾದಲ್ಲಿ ವಿಶೇಷ ಪಾತ್ರದ ಮೂಲಕ ನಿಮ್ಮ ಮುಂದೆ ಬರಲಿದ್ದೇನೆ. ಆದರೆ, ನಾನು ಈ ಸಿನಿಮಾಗೆ ನಾಯಕ ಅಲ್ಲ. ಕೆ.ಮಂಜು ಪುತ್ರ ಶ್ರೇಯಸ್ ಮಂಜು ಅವರನ್ನು ಚಿಕ್ಕ ವಯಸ್ಸಿನಿಂದ ಬಲ್ಲೆ. ಅವರಿಗೆ ಒಳಿತಾಗಲಿ ಎನ್ನುವ ಕಾರಣಕ್ಕೆ ಸಿನಿಮಾದ ವಿಶೇಷ ಪಾತ್ರದಲ್ಲಿ ನಟಿಸಿದ್ದೇನೆ ಎಂದು ದುನಿಯಾ ವಿಜಯ್ ಹೇಳಿದ್ದಾರೆ

**ಲ್ಯಾಂಡ್ ಲಾರ್ಡ್‌ನಲ್ಲಿ ಬ್ಯುಸಿ**

ದುನಿಯಾ ವಿಜಯ್ ಕನ್ನಡದಲ್ಲಿ ಲ್ಯಾಂಡ್ ಲಾರ್ಡ್ ಸಿನಿಮಾವನ್ನು ಮುಗಿಸಿದ್ದಾರೆ. ಈ ಸಿನಿಮಾ ಈಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಹಿಂದೆಂದೂ ಕಾಣಿಸಿಕೊಳ್ಳದ ಪಾತ್ರದಲ್ಲಿ ದುನಿಯಾ ವಿಜಯ್ ನಟಿಸಿದ್ದಾರೆ. ಇದೇ ಸಿನಿಮಾದಲ್ಲಿ ಪುತ್ರಿ ರಿತಾನ್ಯ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಿದ್ದಾರೆ. ವರ್ಷಾಂತ್ಯಕ್ಕೆ ಈ ಸಿನಿಮಾ ತೆರೆಗೆ ಬರುವುದಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಕಾಟೇರ ಸಿನಿಮಾದ ಕಥೆಗಾರ ಜಡೇಶ್ ಕುಮಾರ್ ಹಂಪಿ ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾವನ್ನು ಸಾರಥಿ ನಿರ್ಮಾಪಕ ಕೆವಿ ಸತ್ಯ ಪ್ರಕಾಶ್ ಹಾಗೂ ಕೆ.ಎಸ್ ಸೂರಜ್ ಗೌಡ ನಿರ್ಮಾಣ ಮಾಡುತ್ತಿದ್ದಾರೆ. ಇದು 1990ರಲ್ಲಿ ಹಳ್ಳಿಯೊಂದರಲ್ಲಿ ನಡೆಯುವ ತಂದೆ-ಮಗಳ ಭಾವನಾತ್ಮಕ ಕಥೆ ಆಗಿದೆ.

**ಮೂಕುತಿ ಅಮ್ಮನ್-2 ಶೂಟಿಂಗ್‌ನಲ್ಲಿ ಭಾಗಿ**

ದುನಿಯಾ ವಿಜಯ್ ಕನ್ನಡದ ಜೊತೆಗೆ ತಮಿಳು ಹಾಗೂ ತೆಲುಗು ಸಿನಿಮಾಗಳಲ್ಲಿಯೂ ನಟಿಸಿಸುತ್ತಿದ್ದಾರೆ. ಸದ್ಯ ಚೆನ್ನೈನಲ್ಲಿ ಮುಕುತಿ ಅಮ್ಮನ್ 2 ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ತಮಿಳಿನ ಜನಪ್ರಿಯ ನಿರ್ದೇಶಕ ಸುಂದರ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಹಾಗೇ ತೆಲುಗಿನ ಖ್ಯಾತ ನಿರ್ದೇಶಕ ಪೂರಿ ಜಗನ್ನಾಥ್ ಸಿನಿಮಾದಲ್ಲೂ ವಿಜಯ್ ನಟಿಸುತ್ತಿದ್ದಾರೆ. ಈ ಸಿನಿಮಾದಲ್ಲಿ ವಿಜಯ್ ಸೇತುಪತಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ.

## 19-9-2025 ದಿನ ಭವಿಷ್ಯ

**ಮೇಷ:** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಕೆಲವು ಸಾಮಾಜಿಕ ಸಮಾರಂಭಗಳಿಗೆ ಹಾಜರಾಗಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ.

**ವೃಷಭ:** ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ಸಾಮಾಜಿಕಕಾರ್ಯಗಳಿಗೆಹಾಜರಾಗಲು ಅವಕಾಶಗಳಿರಬಹುದು

**ಮಿಥುನ:** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ನಿಮ್ಮ ತೂಕದ ಮೇಲೆ ಹಿಡಿತ ಹೊಂದಿರಿ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ಸಂಜೆ ಸ್ನೇಹಿತರೊಡನೆ ಹೋಗಿ ಇದು ತುಂಬ ಒಳ್ಳೆಯದನ್ನು ಮಾಡುತ್ತದೆ. ನೀವು ಕೆಲವು ಪ್ರವಾಸೀ ತಾಣಗಳಿಗೆ ಭೇಟಿ ನೀಡುವ ಮೂಲಕ ನಿಮ್ಮ ಪ್ರೇಮ ಜೀವನವನ್ನು ಉಜ್ವಲಗೊಳಿಸಬಹುದು.

**ಕರ್ಕಾಟಕ:** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸುವುದು ನಿಮ್ಮ ಕಾಯಿಲೆಯನ್ನು ಇನ್ನಷ್ಟು ಉಲ್ಬಣಿಸಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ. ಯಾವುದೇ ಪ್ರಮಾಣ ಮಾಡುವ ಮೊದಲು ತಜ್ಞರನ್ನು ಸಂಪರ್ಕಿಸಿ.

**ಸಿಂಹ:** ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸು ಮತ್ತು ಸಹಿಷ್ಣುತೆಯ ಪರಮಾವಧಿಯನ್ನು ಪರೀಕ್ಷಿಸಬಹುದು. ನೀವು ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರುವಂತೆ ಮತ್ತು ಸಕಾರಣವಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು. ನಿಮ್ಮ ಗೌಪ್ಯ ಮಾಹಿತಿಯನ್ನು ನಿಮ್ಮ ಸಂಗಾತಿಯ ಜೊತೆ ಹಂಚಿಕೊಳ್ಳುವ ಮೊದಲು ಯೋಚಿಸಿ.

**ಕನ್ಯಾ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು, ಆದ್ದರಿಂದ ಇಂದು ನೀವು ನಿಮ್ಮ ವಸ್ತುವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು. ಇಂದು ನೀವು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚು ನಿಮ್ಮ ಜೀವನದಲ್ಲಿ ತೆರೆಮರೆಯಲ್ಲಿ ನಡೆಯುತ್ತಿದೆ.

**ತುಲಾ:** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ.

**ವೃಶ್ಚಿಕ:** ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಸ್ನೇಹಿತರೊಬ್ಬರು ಇಂದು ದೊಡ್ಡ ಸಾಲವನ್ನು ಕೇಳಬಹುದು, ನೀವು ಅವರಿಗೆ ಈ ಹಣವನ್ನು ಕೊಟ್ಟರೆ, ನೀವು ಆರ್ಥಿಕ ತೊಂದರೆಗೊಳಗಾಗಬಹುದು. ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರೊಂದಿಗೆ ನಿಮ್ಮ ಗುಣಮಟ್ಟದ ಸಮಯ ಕಳೆಯಿರಿ.

**ಧನು:** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಹಣಕಾಸು ಖಂಡಿತವಾಗಿಯೂ ವೃದ್ಧಿಯಾಗುತ್ತದೆ - ಆದರೆ ಅದೇ ಸಮಯದಲ್ಲಿ ಖರ್ಚೂ ತುಂಬಾ ಹೆಚ್ಚಾಗುತ್ತದೆ. ನಿಮ್ಮ ಜೊತೆಗಿರುವ ಯಾರಾದರೂ ನಿಮ್ಮ ಇತ್ತೀಚಿನ ಕ್ರಮಗಳಿಂದ ಕಿರಿಕಿರಿಗೊಳ್ಳಬಹುದು. ನಿಮ್ಮ ಸಂಗಾತಿಯ ಕೆಟ್ಟ ಆರೋಗ್ಯದಿಂದಾಗಿ ಇಂದು ಪ್ರಣಯಕ್ಕೆ ಧಕ್ಕೆಯಾಗುತ್ತದೆ.

**ಮಕರ:** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ - ನೀವು ಎಲ್ಲಾ ಸಾಧ್ಯವಿರುವ ಕೋನಗಳಿಂದ ಹೂಡಿಕೆಯನ್ನು ಪರಿಶೀಲಿಸದೇ ಹೋದರೆ ನಷ್ಟ ಖಚಿತ. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ. ಮದುವೆಯಾಗುವವರು ತಮ್ಮ ಪ್ರೇಮಿ ಸಂತೋಷದ ಮೂಲವೆಂದು ಕಂಡುಕೊಳ್ಳುತ್ತಾರೆ.

**ಕುಂಭ:** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ. ನಿಮ್ಮ ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸುವ ಅಗತ್ಯವಿದೆ.

**ಮೀನ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು. ಸ್ನೇಹಿತರು ಮತ್ತು ಸಂಬಂಧಿಗಳು ಉಪಕಾರ ಮಾಡುತ್ತಾರೆ, ನೀವು ಅವರ ಸಂಗದಲ್ಲಿ ಸಾಕಷ್ಟು ಸಂತೋಷವಾಗಿರುವಿರಿ.

# ಬಾಲಿವುಡ್‌ನಲ್ಲೇ ಬಿಡಾರ ಹೂಡುತ್ತಾರಾ ಹರ್ಷ? ಕನ್ನಡಕ್ಕೆ ಮರಳಿ ಬರಲ್ವಾ?

## ಬಾಘಿ 4 ಡೈರೆಕ್ಟರ್ ಮನದ ಮಾತು


ಪ್ರತಿಭಾ ಪಲಾಯನ ಅನ್ನುವುದು ಇಂದು ನಿನ್ನೆಯದಲ್ಲ. ಬಹಳ ಹಿಂದಿನಿಂದ್ಲೂ ಪ್ರತಿಭೆ ಇದ್ದೋರು ಒಂದ್ಕಡೆಯಿಂದ ಮತ್ತೊಂದ್ಕಡೆ ಹೋಗೋದು ನಡೀತಾನೆ ಇದೆ. ಅದರಲ್ಲಿಯೂ ಕನ್ನಡ ಚಿತ್ರರಂಗದಿಂದ ಇಲ್ಲಿಯವರೆಗೆ ಅನೇಕ ನಾಯಕಿಯರು ಪರಭಾಷೆಗೆ ವಲಸೆ ಹೋಗಿದ್ದಾರೆ. ಕೆಲವರು ಅಲ್ಲಿಯೇ ಬದುಕು ಕಟ್ಟಿಕೊಂಡರೆ ಇನ್ನು ಹಲವರು ಬಂದ ದಾರಿಗೆ ಸುಂಕ ಇಲ್ಲವೆಂಬಂತೆ ಮರಳಿ ಬಂದಿದ್ದಾರೆ.

ಇನ್ನೂ ಹೀಗೆ ಗುಳೆ ಹೋಗುವರಲ್ಲಿ ಕೆಲವರು ಚಿತ್ರ ಮತ್ತು ಪಾತ್ರ ಚೆನ್ನಾಗಿದೆ ಎಂದು ಹೋದರೆ, ಇನ್ನು ಕೆಲವರು ಇಲ್ಲಿ ಸಿಗುವ ಸಂಭಾವನೆಗಿಂತ ಹೆಚ್ಚು ಅಲ್ಲಿ ಸಿಗುತ್ತೆ ಎಂದು ಹೋಗುತ್ತಾರೆ. ಎಲ್ಲವೂ ಅವರವರ ನಿರ್ಧಾರ ಮತ್ತು ಬದುಕಾದರೂ ಈಗೀಗ ನಾಯಕಿಯರ ಹಿಂದೆ ಹಿಂದೆಯೇ ಕನ್ನಡದ ನಿರ್ದೇಶಕರು ಕೂಡ ಪರಭಾಷೆಯಲ್ಲಿ ಅವಕಾಶ ಪಡೆಯುತ್ತಿದ್ದಾರೆ. ಅಲ್ಲಿಯೂ ಕೂಡ ಗೆಲ್ಲುತ್ತಿದ್ದಾರೆ.

ಆದರೆ. ಹೀಗೆ ಹೋಗಿ ಗೆದ್ದ ಪ್ರಶಾಂತ್ ನೀಲ್ ಮಾತ್ರ ಕನ್ನಡ ಚಿತ್ರರಂಗಕ್ಕೆ ಮರಳಿ ಬರುವ ಮನಸ್ಸು ಮಾಡಲಿಲ್ಲ. ಈ ಹಿನ್ನೆಲೆ ಕನ್ನಡದ ಮತ್ತೊಬ್ಬ ಡೈರೆಕ್ಟರ್ ಎ.ಹರ್ಷ ಕೂಡ ಎಲ್ಲಿ ಪ್ರಶಾಂತ್ ನೀಲ್ ಅವರಂತೆಯೇ ಪರಭಾಷೆಯಲ್ಲಿ ಬಿಡಾರ ಹೂಡುತ್ತಾರೆ ಎನ್ನುವ ಭಯ ಹಲವರಲ್ಲಿದೆ.

ಯಾಕೆಂದರೆ.. ಹರ್ಷ ಮಾಡಿರುವ ಬಾಘಿ 4 ಗೆದ್ದಿದೆ. ಬಾಕ್ಸಾಫೀಸ್‌ನಲ್ಲಿ 200 ಕೋಟಿ.. 300 ಕೋಟಿ.. ಹಣದ ಹೊಳೆ ಹರಿಯದಿದ್ದರೂ ಕೂಡ ಬಾಘಿ 4 ನಿರ್ಮಾಪಕರ ಕೈ ಹಿಡಿದಿದೆ. ನಿರ್ಮಾಪಕರಿಗೆ ನಷ್ಟವಾಗದಂತೆ ಹರ್ಷ ನೋಡಿಕೊಂಡಿದ್ದಾರೆ. ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ ಎನ್ನುವ ಮಾತು ಬಾಲಿವುಡ್‌ನಲ್ಲಿ ಕೇಳಿ ಬರುತ್ತಿದೆ. ಖುದ್ದು ಹರ್ಷ ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಂತೆ ಬಾಘಿ 4 ವಿಶ್ವದಾದ್ಯಂತ ₹89.03 ಕೋಟಿ ಹಣವನ್ನು ಗಳಿಸಿದೆ. ಆ ಪೈಕಿ ಭಾರತದ ಪಾಲು ₹62.74 ಕೋಟಿ ಇದೆ.

ಇನ್ನೂ ಟೈಗರ್ ಶ್ರಾಫ್ ವೃತ್ತಿ ಬದುಕಿನಲ್ಲಿ ಅತೀ ಹೆಚ್ಚು ಹಣ ಗಳಿಸಿದ 7ನೇ ಚಿತ್ರ ಎನ್ನುವ ಹೆಗ್ಗಳಿಕೆಗೆ ಕೂಡ ಬಾಘಿ 4 ಪಾತ್ರವಾಗಿದೆ. ಈ ಹಿನ್ನೆಲೆ ಎ.ಹರ್ಷ ಸ್ಯಾಂಡಲ್‌ವುಡ್‌ಗೆ ಕಂ ಬ್ಯಾಕ್ ಮಾಡ್ತಾರಾ ..?



ಮಾಡಿದರು ಕೂಡ ಯಾವಾಗ..? ಎನ್ನುವ ಪ್ರಶ್ನೆ ಸದ್ಯ ಹಲವರನ್ನು ಕಾಡುತ್ತಿದೆ. ಈ ಪ್ರಶ್ನೆಗಳಿಗೆ ಖುದ್ದು ಹರ್ಷ ನಿಮ್ಮ ಫಿಲ್ಮಿಬೀಟ್ ಕನ್ನಡಗೆ ಉತ್ತರ ನೀಡಿದ್ದಾರೆ.

ಈ ಕುರಿತು ಫಿಲ್ಮಿಬೀಟ್ ಕನ್ನಡ ಜೊತೆ ಮಾತನಾಡಿರುವ ಹರ್ಷ ಕನ್ನಡ ನನಗೆ ಬದುಕು ನೀಡಿದೆ. ಬದುಕು ರೂಪಿಸಿದೆ. ಅಲ್ಲಿಂದ ಇಲ್ಲಿಯವರೆಗೆ ಬಂದಿದ್ದೇನೆ ಅಂದರೆ ಅದಕ್ಕೆ ಕಾರಣ ನಮ್ಮ ಊರು.. ನಮ್ಮ ನಾಡು.. ನಮ್ಮ ಜನ. ಡ್ಯಾನ್ಸರ್ ಆಗಿದ್ದವನನ್ನು ಕರೆದುಕೊಂಡು ಬಂದು ನಿರ್ದೇಶಕನ ಸ್ಥಾನದಲ್ಲಿ ಕೂರಿಸಿದ್ದಾರೆ. ನಮ್ಮ ಜನರನ್ನು ನಾನು ಮರೆಯಲು.. ಅವರನ್ನು ಬಿಡಲು.. ಸಾಧ್ಯವೇ ಇಲ್ಲ. ನಿಜಾ ದುಡ್ಡು ಜಾಸ್ತಿ ಸಿಗಬಹುದು.. ಹೆಸರು ಜಾಸ್ತಿ ಸಿಗಬಹುದು.. ಆದರೆ ಬಂದ ದಾರಿಯನ್ನು ಮರೆಯುವವನು ನಾನಲ್ಲ. 200 % ನಾನು ಕನ್ನಡದಲ್ಲಿ ಮುಂದಿನ ಚಿತ್ರ ಮಾಡುವುದು ಪಕ್ಕಾ. ಈಗಾಗಲೇ ಎರಡು ಮೂರು ಮಾತುಕತೆ ನಡೆಯುತ್ತಿದೆ. ಶೀಘ್ರದಲ್ಲಿಯೇ ಒಳ್ಳೆಯ ಸುದ್ದಿಯ ಜೊತೆ ಮತ್ತೆ ನಿಮ್ಮ ಮುಂದೆ ಬರ್ತೀನಿ ಎಂದು ಹೇಳಿದ್ದಾರೆ.

ಮುಂದುವರೆದು ಈ ಕುರಿತು ಮಾತನಾಡಿರುವ ಹರ್ಷ ಬಾಲಿವುಡ್‌ನಲ್ಲಿ ನನಗೆ ನೀಡಿದ ಕೆಲಸ ನಾನು ಮಾಡಿದ್ದೇನೆ. ಫಲಿತಾಂಶದಿಂದ ಚಿತ್ರದ ನಿರ್ಮಾಪಕರು ಖುಷಿಯಾಗಿದ್ದಾರೆ. ಚಿತ್ರದ ನಾಯಕ ಕೂಡ ಖುಷಿಯಾಗಿದ್ದಾರೆ. ಇದಕ್ಕಿಂತ ನಿರ್ದೇಶಕನಾಗಿ ನನಗೆ ಇನ್ನೇನು ಬೇಕು..? ಇನ್ನು ಭಜರಂಗಿ 2 ಚಿತ್ರದಿಂದ ಬಿಡುವು ಇರದೇ ಕೆಲಸ ಮಾಡುತ್ತಾ ಬಂದಿದ್ದೇನೆ. ಭಜರಂಗಿ 2 ಬಿಡುಗಡೆಯಾದ ಒಂದು ತಿಂಗಳ ನಂತರ ವೇದಾ ಕೆಲಸ ಶುರು ಮಾಡಿದೆ. ವೇದಾ ಬಿಡುಗಡೆಯಾಗಿ ಎರಡು ತಿಂಗಳ ನಂತರ ತೆಲುಗಿನಲ್ಲಿ ಭೀಮ ಶುರು ಮಾಡಿದೆ. ಭೀಮ ಬಿಡುಗಡೆಯಾಗಿ ಮೂರು ನಾಲ್ಕು ತಿಂಗಳಾಗಿತ್ತು. ಅಷ್ಟರಲ್ಲಿ ಬಾಘಿ 4 ಅವಕಾಶ ಸಿಕ್ತು. ಹೀಗಾಗಿ ಸ್ವಲ್ಪ ಆಯಾಸವಾಗಿದೆ. ಚೂರು ವಿಶ್ರಾಂತಿ ಪಡೆದು ಆ ನಂತರ ಮತ್ತೆ ಕೆಲಸಕ್ಕಿಳಿಯುವ ಆಲೋಚನೆ ಇದೆ, ಮರಳಿ ಕನ್ನಡ ಚಿತ್ರರಂಗಕ್ಕೆ ಬರುತ್ತೇನೆ ಎಂದು ಹೇಳಿದ್ದಾರೆ.

ಅಂದ್ಹಾಗೇ ಬಾಘಿ 4 ಚಿತ್ರದ ನಂತರ ಹರ್ಷಗೆ ಹಿಂದಿ ಚಿತ್ರರಂಗದಲ್ಲಿ ಕೂಡ ಹಲವು ಅವಕಾಶಗಳು ಬರುತ್ತಿವೆ. ಹರ್ಷ ಅವರ ಕೆಲಸವನ್ನು ನೋಡಿ ಹಲವರು ಮೆಚ್ಚಿಕೊಂಡು ಹರ್ಷ ಜೊತೆ ಮಾತನಾಡಿದ್ದಾರೆ. ಕೆಲ ಯೋಜನೆಗಳು ಅಂತಿಮ ಕೂಡ ಆಗಿವೆ. ಆದರೆ ಆ ಕುರಿತು ಮಾತನಾಡುವಂತೆ ಇಲ್ಲ. ಯಾಕೆಂದರೆ ಅಗ್ರಿಮೆಂಟ್ ಪ್ರಕಾರ ಸುದ್ದಿಯನ್ನು ಹೇಳಬೇಕಾದವರೇ ಹೇಳಬೇಕು. ಈ ಹಿನ್ನೆಲೆ ಬಾಲಿವುಡ್‌ನ ಮುಂದಿನ ಚಿತ್ರದ ಕುರಿತು ಕೂಡ ಸರಿಯಾದ ಸಮಯಕ್ಕೆ ಮಾಹಿತಿ ಎಲ್ಲರಿಗೆ ಸಿಗುತ್ತೆ, ಆದರೆ ಅದಕ್ಕಿಂತ ಮೊದಲು ಕನ್ನಡ ಚಿತ್ರದ ಕೆಲಸ ಶುರುವಾಗುತ್ತೆ ಎಂದು ಕೂಡ ಹರ್ಷ ಫಿಲ್ಮಿಬೀಟ್ ಕನ್ನಡಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

# 8 ವರ್ಷಗಳ ಬಳಿಕ ಸಿನಿಮಾಗೆ ಅಮೂಲ್ಯ ಎಂಟ್ರಿ; ಏನಿದು ಪೀಕಬೂ?

ಬಹಳ ದಿನಗಳಿಂದ ಸಿನಿಮಾ ಪ್ರಿಯರಿಗೊಂದು ಆಸೆಯಿತ್ತು. ಗೋಲ್ಡನ್ ಕ್ವೀನ್ ಅಮೂಲ್ಯರನ್ನು ಮತ್ತೆ ತೆರೆಮೇಲೆ ನೋಡಬೇಕು? ಅವರು ಮತ್ತೆ ಸಿನಿಮಾ ಮಾಡಬೇಕು ಅಂತ ಬೇಡಿಕೆ ಇಡುತ್ತಲೇ ಇದ್ದರು. ಅಮೂಲ್ಯ ಮಾತ್ರ ಈ ಬಗ್ಗೆ ಏನೂ ಪ್ರತಿಕ್ರಿಯೆ ನೀಡಿರಲಿಲ್ಲ. ಆದರೆ, ಸೈಲೆಂಟ್ ಆಗಿಯೇ ಕಮ್‌ಬ್ಯಾಕ್ ಮಾಡುವುದಕ್ಕೆ ತಯಾರಿ ನಡೆಸುತ್ತಲೇ ಇದ್ದರು. ಶ್ರಾವಣಿ ಸುಬ್ರಮಣ್ಯ ಸಿನಿಮಾದ ನಿರ್ದೇಶಕರೊಂದಿಗೆ ಚರ್ಚೆ ನಡೆಯುತ್ತಲೇ ಇತ್ತು. ಕೊನೆಗೂ ಅವರ ಹುಟುಹಬ್ಬಕ್ಕೆ (ಸೆಪ್ಟೆಂಬರ್ 14) ಸಿನಿಮಾ ಅನೌನ್ಸ್ ಆಗಿದೆ.

ಅಮೂಲ್ಯ ನಟಿಸಿದ ಕೊನೆಯ ಸಿನಿಮಾ ಮಾಸ್ತಿಗುಡಿ. ದುನಿಯಾ ವಿಜಯ್ ನಟಿಸಿದ ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದರು. ತಮ್ಮ ವೃತ್ತಿ ಬದುಕಿನ ಉತ್ತುಂಗದಲ್ಲಿ ಇರುವಾಗಲೇ ಅಮೂಲ್ಯ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಬಳಿಕ ಕುಟುಂಬ, ಮಕ್ಕಳು ಅಂತ ಬ್ಯುಸಿಯಾಗಿಬಿಟ್ಟರು. ಇಬ್ಬರು ಅವಳಿ ಮಕ್ಕಳನ್ನು ಬೆಳೆಸುವುದರಲ್ಲಿ ಗಮನ ಹರಿಸಿದ್ದರು. ಇತ್ತ ಸೋಶಿಯಲ್ ಮೀಡಿಯಾದಲ್ಲಿ ಅಮೂಲ್ಯಗೆ ಕಮ್ ಬ್ಯಾಕ್ ಮಾಡುವಂತೆ ಒತ್ತಡಗಳು ಹೆಚ್ಚಾಗುತ್ತಲೇ ಇದ್ದವು.

ಒಳ್ಳೆಯ ಸ್ಕ್ರಿಪ್ಟ್ ಹುಡುಕಾಡುತ್ತಿದ್ದ ಅಮೂಲ್ಯ ಕೊನೆಗೂ ಕಮ್ ಬ್ಯಾಕ್ ಮಾಡುವುದಕ್ಕೆ ಸಜ್ಜಾಗಿದ್ದಾರೆ. ಬರೋಬ್ಬರಿ 8 ವರ್ಷಗಳ ಬಳಿಕ ಬೆಳ್ಳಿ ಪರದೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಚಿಕ್ಕದೊಂದು ಟೀಸರ್ ಮೂಲಕ ಅಮೂಲ್ಯ ಅವರ ಪಾತ್ರವನ್ನು ನಿರ್ದೇಶಕ ಮಂಜು ಸ್ವರಾಜ್ ಪರಿಚಯಿಸಿದ್ದಾರೆ. ಈ ಸಿನಿಮಾ ಬಗ್ಗೆ, ಅಮೂಲ್ಯ ಕಮ್‌ಬ್ಯಾಕ್ ಬಗ್ಗೆ ನಿರ್ದೇಶಕ ಮಂಜು ಸ್ವರಾಜ್ ಫಿಲ್ಮಿಬೀಟ್ ಕನ್ನಡದ ಜೊತೆ ಇಂಟ್ರೆಸ್ಟಿಂಗ್ ಸಂಗತಿಗಳನ್ನು ಹಂಚಿಕೊಂಡಿದ್ದಾರೆ.




ಅಮೂಲ್ಯ ಹುಟ್ಟುಹಬ್ಬಕ್ಕೆ ಟೀಸರ್ ಮೂಲಕ ರೀ ಎಂಟ್ರಿ ಕೊಡುತ್ತಿರುವ ಪೀಕಬೂ ಸಿನಿಮಾವನ್ನು ಅನೌನ್ಸ್ ಮಾಡಲಾಗಿದೆ. ಪೀಕಬೂ ಸಿನಿಮಾದ ಟೀಸರ್ ಡ್ಯಾನ್ಸ್ ಮೂಮೆಂಟ್ ಅನ್ನು ವಿ ನಾಗೇಂದ್ರ ಕೊರಿಯೋಗ್ರಾಫ್ ಮಾಡಿದ್ದಾರೆ. ಫನ್ನಿ ಮ್ಯೂಸಿಕ್‌ಗೆ ಅಮೂಲ್ಯ ಸಿನಿಮಾ ಕ್ಯಾರೆಕ್ಟರ್ ರಿವೀಲ್ ಮಾಡಲಾಗಿದೆ. ಸಿಂಗಲ್ ಟೇಕ್‌ನಲ್ಲಿಯೇ ಈ ಟೀಸರ್‌ಗೆ ಸ್ಟೆಪ್ ಹಾಕಿದ್ದು, ಇನ್ನೂ ಹಿಡಿತ ಕಂಡುಕೊಂಡಿಲ್ಲ ಅನ್ನೋದನ್ನು ಸಾಬೀತು ಮಾಡಿದ್ದಾರೆ. ಈ ಸಿನಿಮಾ ಬಗ್ಗೆ ಮಂಜು ಸ್ವರಾಜ್ ಕೂಡ ಇಂಟ್ರೆಸ್ಟಿಂಗ್ ವಿಷಯಗಳನ್ನು ಹಂಚಿಕೊಂಡಿದ್ದಾರೆ.

# ಹೋಗುವವರನ್ನು ತಡೆಯಲ್ಲ: ಡಿ.ಕೆ.ಶಿವಕುಮಾರ್

## ಕಂಪನಿಗಳು ತೊರೆಯಲು ಸ್ವತಂತ್ರವಾಗಿವೆ | ಸರ್ಕಾರಕ್ಕೆ ಬೆದರಿಕೆ ಹಾಕಲು ಸಾಧ್ಯವಿಲ್ಲ | ಗುಂಡಿ ಮುಚ್ಚಲು ಗಡುವು

• ಪ್ರಜೋದಯ ವರದಿ

**ಬೆಂಗಳೂರು:** ಬೆಂಗಳೂರಿನ ಸೌಲಭ್ಯಗಳ ಬಗ್ಗೆ ಅಸಮಾಧಾನವಿದ್ದರೆ ಕಂಪನಿಗಳು ತೊರೆಯಲು ಸ್ವತಂತ್ರವಾಗಿವೆ. ಆದರೆ ಸರ್ಕಾರಕ್ಕೆ ಬೆದರಿಕೆ ಹಾಕಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ಗುರುವಾರ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್, ನಗರದ ಮೂಲಸೌಕರ್ಯಗಳನ್ನು ಸರಿಪಡಿಸಲು ಸರ್ಕಾರ ಬದ್ಧವಾಗಿದೆ. ರಸ್ತೆ ಗುಂಡಿಗಳನ್ನು ಮುಚ್ಚಲು ನವೆಂಬರ್ ಗಡುವು ನೀಡಲಾಗಿದೆ. ಬೆಂಗಳೂರಿನ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಇದೇ ವೇಳೆ ಉದ್ಯಮಿಗಳು ಬೆಂಗಳೂರು ತೊರೆಯುವ ಟ್ವೀಟ್ ಕುರಿತು ಮಾತನಾಡಿದ ಅವರು, ಬೆಂಗಳೂರಿನ ಬಗ್ಗೆ ತೃಪ್ತಿ ಇಲ್ಲವೆಂದು ಹೋಗೋರನ್ನ ತಡೆಯಲ್ಲ. ಆದರೆ, ಸರ್ಕಾರಕ್ಕೆ ಬೆದರಿಸಲು, ಬ್ಲ್ಯಾಕ್ ಮೇಲ್ ಮಾಡೋಕೆ ಬರಬೇಡಿ ಎಂದು ಕಿಡಿಕಾರಿದರು.

ಕಂಪನಿಗಳು ತಮ್ಮ ಸ್ಥಳವನ್ನು ಬದಲಾಯಿಸುವ ನಿರ್ಧಾರವು ವ್ಯಾಪಾರ ಸಮಸ್ಯೆಗಳ ಕಾರಣದಿಂದಾಗಿರಬಹುದು. ಬೆಂಗಳೂರು ನೀಡುವ ಸೌಲಭ್ಯಗಳು ಮತ್ತು ಪ್ರತಿಭೆಗಳಿಂದ ತೃಪ್ತರಾಗದಿದ್ದರೆ ಯಾರಾದರೂ ಸ್ಥಳಾಂತರಗೊಳ್ಳಲು ಸ್ವತಂತ್ರರು ಎಂದು ತಿಳಿಸಿದರು.

ಆದರೆ, ಅವರು ಸರ್ಕಾರವನ್ನು ಬೆದರಿಸಲು ಸಾಧ್ಯವಿಲ್ಲ. ಸರ್ಕಾರವನ್ನು ಬ್ಲ್ಯಾಕ್‌ಮೇಲ್ ಮಾಡುವುದು ಕೆಲಸ ಮಾಡುವುದಿಲ್ಲ. ನಾವು ರಾಜ್ಯದ ಜನರಿಗೆ ಸೇವೆ ಸಲ್ಲಿಸಬೇಕು. ಯಾರೂ ಬೆಂಗಳೂರಿನಿಂದ ಹೊರ ಹೋಗುವುದಿಲ್ಲ. ಇದನ್ನು ದಾಖಲಿಸಿಕೊಳ್ಳಿ ಎಂದು ಹೇಳಿದರು.



ಅಂತೆಯೇ ಬೆಂಗಳೂರು ಮತ್ತು ನಾವು ಒದಗಿಸುವ ಮೂಲಸೌಕರ್ಯವನ್ನು ಯಾರೂ ಹೊಂದಿಸಲು ಸಾಧ್ಯವಿಲ್ಲ. ಬೆಂಗಳೂರಿಗೆ ಬರುವ ಮೊದಲು, ಅದು ಏನು ನೀಡುತ್ತದೆ ಎಂಬುದನ್ನು ನೋಡಿದರು. ಆ ನಂತರ ನಿರ್ಧಾರ ತೆಗೆದುಕೊಂಡರು. ಬೆಂಗಳೂರಿನ ಇತಿಹಾಸದಲ್ಲಿ ಮೊದಲ ಬಾರಿಗೆ 112 ಕಿ.ಮೀ. ಫ್ಲೈಓವರ್‌ಗಳು ಮತ್ತು 44 ಕಿ.ಮೀ.ಗಿಂತ ಹೆಚ್ಚು ಎತ್ತರದ ಡಬಲ್ ಡೆಕ್ಕರ್ ರಸ್ತೆಗಳನ್ನು ನಿರ್ಮಿಸುತ್ತಿದ್ದೇವೆ. ಈ ಕೆಲಸ ಶೀಘ್ರದಲ್ಲಿಯೇ ಮುಕ್ತಾಯವಾಗಲಿವೆ. ಬೆಂಗಳೂರು ವೇಗವಾಗಿ ಬೆಳೆಯುತ್ತಿದೆ ಮತ್ತು ಪ್ರತಿದಿನ ನೂರಾರು ಕಂಪನಿಗಳು ಇಲ್ಲಿಗೆ ಬರುತ್ತಿವೆ ಎಂದು ಹೇಳಿದರು.

**ನವೆಂಬರ್ ಗಡುವು:**

ನಾನು ಅಧಿಕಾರಿಗಳಿಗೆ ಬದ್ಧತೆಯಿಂದ ಕೆಲಸ ಮಾಡಿ ಸಮಸ್ಯೆ ಬಗೆಹರಿಸಲು ತಿಳಿಸಿದ್ದೇನೆ. ಹಣ ಬಿಡುಗಡೆಯಾಗಿದೆ. ಗುತ್ತಿಗೆದಾರರು ಕೆಲಸ ಕೈಗೊಂಡಿದ್ದಾರೆ. ಬೆಂಗಳೂರಿನ ಸ್ವಚ್ಛತೆ ಮತ್ತು ಗುಂಡಿಗಳನ್ನು ಸರಿಪಡಿಸುವುದು ನಮ್ಮ ಆದ್ಯತೆಯಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಬೆಂಗಳೂರಿನ ರಸ್ತೆ ಗುಂಡಿಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಲು ನವೆಂಬರ್ ಒಳಗೆ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಗುತ್ತಿಗೆದಾರರಿಗೆ ಅಂತಿಮ ಗಡುವು ನೀಡಲಾಗಿದೆ. ಸ್ವಚ್ಛ ಬೆಂಗಳೂರು ಹಾಗೂ ಸುಗಮ ಸಂಚಾರವೇ ನಮ್ಮ ಗುರಿಯಾಗಿರುವುದರಿಂದ ಆದಷ್ಟು ಬೇಗ ರಸ್ತೆ ಗುಂಡಿಗಳಿಗೆ ಜಿಬಿಎ ಮುಕ್ತಿ ನೀಡಲಿದೆ ಎಂದು ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

**ವ್ಯಾಪಕ ಸದ್ದು ಮಾಡಿದ್ದ ಉದ್ಯಮಿ ಟ್ವೀಟ್**

ಗುಂಡಿಗಳ ಸಮಸ್ಯೆ, ಮೂಲ ಸೌಕರ್ಯಗಳ ಕೊರತೆಯಿಂದ ಬೆಂಗಳೂರಿನಿಂದ ಹೊರ ಹೋಗುತ್ತೇವೆ ಎಂದು ಬ್ಲಾಕ್‌ಬಕ್ ಕಂಪನಿ ಸಿಇಒ ರಾಜೇಶ್ ಯಬಾಜಿ ಟ್ವೀಟ್ ಮಾಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಹಲವು ಉದ್ಯಮಿಗಳು ನಗರದ ಸಮಸ್ಯೆಯನ್ನು ಶೀಘ್ರ ಪರಿಹಾರ ಮಾಡಬೇಕು ಎಂದು ಸರ್ಕಾರ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದರು.

ಇದು ಸಾಮಾಜಿಕ ಜಾಲತಾಣದಲ್ಲಿ ಭಾರೀ ಸದ್ದು ಮಾಡಿತ್ತು.

# ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ರಕ್ತದಾನ ಮಾಡಲು ಎಲ್ಲರೂ ಸ್ವಯಂಪ್ರೇರಿತರಾಗಿ ಮುಂದೆ ಬರಬೇಕು. ಯುವ ಜನತೆ ಭಾರತದ ರಕ್ತದ ಬೇಡಿಕೆಯ ಕೊರತೆಯನ್ನು ನೀಗಿಸಲು ರಕ್ತದಾನಕ್ಕೆ ಮುಂದಾಗಬೇಕು ಹೆಮ್ಮಿಗೆ ಮೋಹನ್ ತಿಳಿಸಿದರು.

ಶ್ರೀಜಗದ್ಗುರು ಡಾ. ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿರವರ 110ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಹಾಸನ ಶಾಖೆ ಹಾಗೂ ಜೆ.ಎಸ್.ಎಸ್ ಬಿ.ಎಡ್ ಕಾಲೇಜು, ಯುವ ರೆಡ್ ಕ್ರಾಸ್ ಘಟಕ ಸಕಲೇಶಪುರ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದ ಜನಸಂಖ್ಯೆಯಲ್ಲಿ ಶೇ. 35 ಭಾಗದ ಜನರು ಓ ಪಾಸಿಟಿವ್ ರಕ್ತದ ಗುಂಪಿಗೆ ಸೇರಿದವರು ಹಾಗೂ ಎ ಪಾಸಿಟಿವ್ ರಕ್ತದ ಗುಂಪಿನವರು ಶೇಕಡ 30 ಭಾಗ ಇದ್ದು, ಓ ನೆಗೆಟಿವ್ ರಕ್ತದ ಗುಂಪಿಗೆ ಸೇರಿದವರು, ಎ ನೆಗೆಟಿವ್ ರಕ್ತದ ಗುಂಪಿನವರು



ಶೇ.13 ಮತ್ತು 8 ಪ್ರಮಾಣದಲ್ಲಿದ್ದಾರೆ ಎಂದು ಹೇಳಿದರು ಹಾಗೂ ಅದೇ ರೀತಿ ಬಿ ಪಾಸಿಟಿವ್ ಮತ್ತು ಎಬಿ ಪಾಸಿಟಿವ್ ರಕ್ತದ ಗುಂಪಿನವರು ಅತಿ ಕಡಿಮೆ ಶೇಕಡವಾರು ಇದ್ದಾರೆ ಎಂದು ತಿಳಿಸಿದರು.

ಒಂದು ಯುನಿಟ್ ಅಂದರೆ 450 ಮೀ. ಲೀಟರ್ ರಕ್ತದಾನದಿಂದ ಸುಮಾರು ಮೂರು ಜೀವಗಳನ್ನು ಉಳಿಸಲು ಸಾಧ್ಯ ಹಾಗೂ ರಕ್ತವನ್ನು ನಾಲ್ಕು ಭಾಗಗಳಾಗಿ ಪ್ಲಾಸ್ಮ, ಕೆಂಪು ರಕ್ತಕಣಗಳು, ಪ್ಲೇಟ್‌ಲೆಟ್ ಹಾಗೂ ಬಿಳಿ ರಕ್ತಕಣಗಳಾಗಿ ವಿಂಗಡಿಸಬಹುದು. ರಕ್ತದಾನದಿಂದ ಹೃದಯ ಸಂಬಂಧಿ ರೋಗಗಳು, ಕ್ಯಾನ್ಸರ್ ಕಾಯಿಲೆಗಳು, ರಕ್ತದೊತ್ತಡ ಹಾಗೂ ಇತರೆ ಸಮಸ್ಯೆಗಳನ್ನು ದೂರ ಮಾಡಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಅಧ್ಯಾಪಕರಾದ ಡಾ.ದಿನೇಶ್, ಮಂಜುನಾಥ, ರೆಡ್ ಕ್ರಾಸ್ ಸಂಸ್ಥೆ ನಿರ್ದೇಶಕರಾದ ಉದಯಕುಮಾರ್, ಶಬ್ಬೀರ್ ಅಹಮದ್, ಕಾಲೇಜಿನ ಪ್ರಾಂಶುಪಾಲ ಡಾ.ನಂಜುಡಪ್ಪ, ಜಯೇಂದ್ರಕುಮಾರ್ ಹೆಚ್.ಡಿ., ಭೀಮರಾಜ್ ಹಾಗೂ ಸಕಲೇಶಪುರ ತಾಲ್ಲೂಕು ರೆಡ್ ಕ್ರಾಸ್ ಘಟಕದ ಅಧ್ಯಕ್ಷೆ ಶಾರದಾ ಗುರುಮೂರ್ತಿ ಹಾಗೂ ಕಾರ್ಯದರ್ಶಿ ರೇಖಾ ಸುರೇಶ್ ಭಾಗವಹಿಸಿದ್ದರು.

# ಸೋಮೇಶ್ವರಸ್ವಾಮಿ ದೇವಾಲಯ ಕಾಮಗಾರಿ ಪರಿಶೀಲನೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ಸೋಮೇಶ್ವರ ದೇವಾಲಯದಲ್ಲಿ ನಡೆಯುತ್ತಿರುವ ಸಂರಕ್ಷಣೆ ಕಾಮಗಾರಿಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಮುಖ್ಯ ಅಭಿಯಂತರ ಅಂಬರೀಶ್ ಅವರು ದೇವಾಲಯಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ದೇವಾಲಯ ಹೊಯ್ಸಳರ ಕಾಲದ ಏಕಕೂಟ ದೇವಾಲಯವಾಗಿದ್ದು, ದೇವಾಲಯವನ್ನು ಬಿಚ್ಚಿ ಮರು ಜೋಡಣೆ ಕಾರ್ಯಗಳು ಮುಗಿದಿದೆ. ದೇವಾಲಯದ ನಕ್ಷಾತ್ರಾಕಾರದ ಜಗುಲಿ ಮೇಲೆ ಕಲ್ಲಿನ ನೆಲಹಾಸು, ದೇವಾ



ಲಯದ ಸುತ್ತಲೂ ಕಲ್ಲಿನ ನೆಲಹಾಸು ಕಾರ್ಯಗಳ ಕಾಮಗಾರಿ ನಡೆಯುತ್ತಿದೆ ಎಂದು ಹೇಳಿದರು.

ದೇವಾಲಯದ ಒಳಭಾಗ ಕಲ್ಲಿನ ನೆಲಹಾಸು ಹಾಗೂ ದೇವಾಲಯದ ಮೇಲೆ ಚುರುಕಿ, ವಾಟರ್ ವಾಷ್ ಕಾರ್ಯಗಳು ಆಗಬೇಕಾಗಿದೆ ಎಂದ ಅವರು, ಈ ಕಾರ್ಯಗಳನ್ನು ತ್ವರಿತವಾಗಿ ಮುಗಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದ್ದು, ಇನ್ನು ಎರಡು ತಿಂಗಳಲ್ಲಿ ಈ ಕಾರ್ಯ ಮುಗಿಸಿ ಕೊಡುವುದಾಗಿ ತಿಳಿಸಿದ್ದಾರೆ ಎಂದರು.

ಹಾಸನ ಪುರಾತತ್ವ ಸಂಗ್ರಹಾಲಯಗಳ ಕ್ಯೂರೇಟರ್ ಕುಮಾರ್, ಅಧಿಕಾರಿಗಳು ಹಾಗೂ ಮತ್ತಿತರರು ಹಾಜರಿದ್ದರು.

# ನಾಳೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಸೆ.20 ರಂದು 66/11 ಕೆ.ವಿ. ಸಕಲೇಶಪುರ ಮತ್ತು ಬಾಳ್ಳುಪೇಟೆ ವಿ.ವಿ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 66/11ಕೆ.ವಿ ಸಕಲೇಶಪುರ ಮತ್ತು ಬಾಳ್ಳುಪೇಟೆ ವಿ.ವಿ. ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಕವಿಪ್ರನಿ ನಿಗಮದ ಕಾರ್ಯಾಚರಣೆಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾತಿ ನಿಂದನೆ ಆರೋಪ: ಕರವೇ ಜಿಲ್ಲಾಧ್ಯಕ್ಷರ ಬಂಧನಕ್ಕೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಪ್ರತಿಭಟನೆ ವೇಳೆ ಸಾರ್ವಜನಿಕವಾಗಿ ಭೋವಿ ಸಮುದಾಯವನ್ನು ವಡ್ಡರು ಎಂದು ಕರೆಯುವ ಮೂಲಕ ಜಾತಿ ನಿಂದನೆ ಮಾಡಿರುವ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಬಂಧನಕ್ಕೆ ಆಗ್ರಹಿಸಿ ಎಸ್.ಪಿ. ಕಚೇರಿಗೆ ಆಲೂರು ತಾಲ್ಲೂಕು ಕಾರುಗೋಡು ಗ್ರಾಮಸ್ಥರು ದೂರು ನೀಡಿ ಮನವಿ ಸಲ್ಲಿಸಿದರು.

ಅಖಿಲ ಕರ್ನಾಟಕ ಭೋವಿ ಮಹಾಸಭಾ ರಾಜ್ಯಾಧ್ಯಕ್ಷ ಎಚ್.ಮಂಜಪ್ಪ ಮಾತನಾಡಿ, ಆಲೂರು ತಾಲ್ಲೂಕಿನ ಹೊಸಮತ ಗ್ರಾಮದ ಸರ್ವೆ ನಂಬರ್ 151 ರಲ್ಲಿ ಭೋವಿ ಸಮುದಾಯದ ಜನರು ಅಧಿಕೃತವಾಗಿ ಲೈಸೆನ್ಸ್ ಪಡೆದು ಸರ್ವೆ ನಂಬರ್ 151ರ



ಜಾಗದಲ್ಲಿ ಕಾನೂನು ಬದ್ಧವಾಗಿ ಕಲ್ಲು ಗಣಿಗಾರಿಕೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಇದನ್ನು ಸಹಿಸದ ಕರವೇ ಮುಖಂಡರು ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಗಣಿಗಾರಿಕೆ ಬಂದ್ ಮಾಡಿಸಲು ಒತ್ತಡ ಹಾಕಿದ್ದಾರೆ ಎಂದು ದೂರಿದರು.

ಸೆ.15ರಂದು ಗಣಿಗಾರಿಕೆ ನಿಲ್ಲಿಸಲು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುತ್ತಿದ್ದಾಗ, ಅಪರ ಜಿಲ್ಲಾಧಿಕಾರಿ ಎದುರೇ ಸಮುದಾಯವನ್ನು ಉದ್ದೇಶ ತಮಿಳುನಾಡು ವಡ್ಡರು ಎಂದು ಹೇಳಿ ಜಾತಿಗೆ ನಿಂದನೆ ಮಾಡಿದ್ದಾರೆ. ಈಗಾಗಲೇ ಈ ಕುರಿತು ಎಸ್ಪಿ ಕಚೇರಿಗೆ ದೂರು ನೀಡಲಾಗಿದ್ದು ಪೊಲೀಸರು ಶೀಘ್ರವೇ ಸತೀಶ್ ಪಟೇಲ್ ಅವರನ್ನು ಬಂಧಿಸಿ ಜಾತಿ ನಿಂದನೆ ಕೇಸು ದಾಖಲಿಸಬೇಕು ಎಂದು ಒತ್ತಾಯಿಸಿದರು.

ಹೊಸಮತ ಗ್ರಾಮದಲ್ಲಿ ಜಿಲ್ಲಾಡಳಿತ, ಗಣಿಗಾರಿಕೆ ಇಲಾಖೆ ಎಲ್ಲರ ಅನುಮತಿ ಮೇರೆಗೆ ಗಣಿಗಾರಿಕೆಯನ್ನೇ ತಮ್ಮ ಜೀವನವನ್ನಾಗಿಸಿಕೊಂಡು ಬದುಕುತ್ತಿರುವ ನೂರಾರು ಕುಟುಂಬಗಳು ಕೆಲಸ ಮಾಡಿಕೊಂಡು ಬರುತ್ತಿವೆ, ಆದರೆ ಇದನ್ನು ಸಹಿಸದ ಕೆಲ ಕಿಡಿಗೇಡಿಗಳು ಕುತಂತ್ರ ಮಾಡಿ ಅದನ್ನು ಸ್ಥಗಿತ ಮಾಡಿ ಭೋವಿ ಸಮುದಾಯದ ಜನರ ಹೊಟ್ಟೆಯ ಮೇಲೆ ಹೊಡೆಯುವ ಹುನ್ನಾರ ಮಾಡಿದ್ದಾರೆ ಎಂದು ದೂರಿದರು.

ಭೋವಿ ಸಂಘದ ಜಿಲ್ಲಾಧ್ಯಕ್ಷ ಸಂದೀಪ್, ತಾಲೂಕು ಅಧ್ಯಕ್ಷ ಪ್ರದೀಪ, ನವೀನ್, ಮಹದೇವ್, ಶೇಖರ್, ಪ್ರೇಮ್ ಕುಮಾರ್, ಆರುಮೊಗಮ್, ಶ್ರೀನಿವಾಸ್, ಪ್ರಭು, ಶಾಂತಕುಮಾರ, ಮಂಜುಸ್ವಾಮಿ, ರೂಪೇಶ್, ಶ್ರೀಧರ, ಯುವರಾಜ್ ಇತರರು ಉಪಸ್ಥಿತರಿದ್ದರು.

# ಗರ್ಭಿಣಿ, ಬಾಣಂತಿಯರು ಪೌಷ್ಟಿಕ ಆಹಾರ ಸೇವಿಸಿ

## ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಕೆ.ದ್ರಾಕ್ಷಾಯಿಣಿ

• ಪ್ರಜೋದಯ ವರದಿ

**ಹಾಸನ:** ಗರ್ಭಿಣಿಯರು, ಬಾಣಂತಿಯರು, ಹದಿಹರೆಯದ ಹೆಣ್ಣುಮಕ್ಕಳು ಪ್ರತಿನಿತ್ಯ ಪೌಷ್ಟಿಕ ಆಹಾರಗಳನ್ನು ಸೇವಿಸಬೇಕು. ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಜನಸಾಮಾನರೆಲ್ಲರೂ ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಕೆ.ದ್ರಾಕ್ಷಾಯಿಣಿ ಅವರು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೂವನಹಳ್ಳಿ ವ್ಯಾಪ್ತಿಯ ಹೆಚ್.ಮೈಲಹಳ್ಳಿಯಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಪೋಷಣ್ ಮಾಸಾಚಾರಣೆ ಹಾಗೂ ಪೌಷ್ಟಿಕ ಆಂದೋಲನ ಕಾರ್ಯಕ್ರಮವನ್ನು



ಉದ್ಘಾಟಿಸಿ ಮಾತನಾಡಿದ ಅವರು, ಅಪೌಷ್ಟಿಕತೆಯ ಬಗ್ಗೆ ಗರ್ಭಿಣಿ, ಬಾಣಂತಿ, ಹದಿಹರೆಯದ ಹೆಣ್ಣು ಮಕ್ಕಳಿಗೆ ಕಾನೂನು ಅರಿವುಗಳ ಬಗ್ಗೆ ಸಮಗ್ರವಾಗಿ ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಸಿ.ಜ್ಯೋತಿಲಕ್ಷ್ಮಿ ಅವರು ಮಾತನಾಡಿ, ಜನಸಾಮಾನ್ಯರು ಉಪಯೋಗಿಸುವ ಆಹಾರದ ಬಗ್ಗೆ, ಸಾವಯವ ಕೃಷಿ ಬಳಸಿ ಬೆಳೆಯುವ ಆಹಾರ ಪದಾರ್ಥ ಹಾಗೂ ಹಣ್ಣು, ತರಕಾರಿಗಳನ್ನು ಬಳಸಲು, ಗರ್ಭಿಣಿ ಮಹಿಳೆಯಲ್ಲಿ ಕಾಣಿಸಿಕೊಳ್ಳುವ ರಕ್ತಹೀನತೆ ಹಾಗೂ ಅವರ ಆಹಾರ ಪದ್ಧತಿ ಬಗ್ಗೆ ತಿಳಿಸಿದರು.

ಇಲಾಖೆಯಿಂದ ಸಿಗುವ ಪೂರಕ ಪೌಷ್ಠಿಕ ಆಹಾರ, ಮೊಟ್ಟೆ ವಿತರಣೆ ಬಗ್ಗೆ ತಿಳಿಸಿದರು ಹಾಗೂ ಹಿರಿಯ ನಾಗರೀಕರು, ವಿಕಲಚೇತನ ಮಕ್ಕಳಿಗೆ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿಸಿದರಲ್ಲದೆ, ಬಾಲ್ಯ ವಿವಾಹ ಮತ್ತು ಪೋಕ್ಸೋ ಕಾಯ್ದೆ, ಬಾಲ ಕಾರ್ಮಿಕರು, ಬಾಲ ನ್ಯಾಯ ಮಂಡಳಿ, ಬಾಲಾಪರಾಧಿ, ಮತ್ತು ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡಿದರು.

ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬಿ.ಸಿ.ಗಂಗಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಇಂದು ತೆಂಗು ಕಾಯಕಲ್ಪ ರಥ ಯಾತ್ರೆಗೆ ಚಾಲನೆ

**ಹಾಸನ:** ತೋಟಗಾರಿಕೆ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿ ಕಂಡು ಬಂದಿರುವ ತೆಂಗು ಬೆಳೆಯಲ್ಲಿ ರೋಗ, ಕೀಟಗಳು ಹಾಗೂ ಉತ್ತಮ ಬೇಸಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಎಲ್ಲಾ ರೈತರಿಗೆ ಮಾಹಿತಿ ನೀಡುವ ಉದ್ದೇಶದಿಂದ ವಿಶೇಷ ವಾಹನದಲ್ಲಿ ಪ್ರಚಾರ ಕಾರ್ಯಕ್ರಮ ಆಯೋಜಿಸಿದ್ದು, ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸೆ.19 ರಂದು ಬೆಳಿಗ್ಗೆ 10:30 ಕ್ಕೆ ತೆಂಗು ಕಾಯಕಲ್ಪ ರಥಯಾತ್ರೆಗೆ ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಚಾಲನೆ ನೀಡಲಿದ್ದಾರೆ.

ಶಾಸಕ ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಭಾಗವಹಿಸಲಿದ್ದಾರೆ.

# ಸಾವಯವ ಕೃಷಿಯಿಂದ ಆರೋಗ್ಯಕರ ಬೆಳೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾವಯವ ಕೃಷಿ ಪದ್ಧತಿಯಲ್ಲಿ ರಾಸಾಯನಿಕ ಮುಕ್ತವಾದ ಆರೋಗ್ಯಕರ ಆಹಾರಗಳನ್ನು ಬೆಳೆಯಬಹುದು ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ರಾಘವೇಂದ್ರ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬುಧವಾರ ಏರ್ಪಡಿಸಿದ್ದ ಪರಿಸರ, ಜಾಗೃತಿ ಮತ್ತು ಮಾಹಿತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಈ ಕೃಷಿ ಪದ್ಧತಿಯಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಪರಿಸರದ ಮೇಲೆ ಯಾವುದೇ ರೀತಿಯ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದರು.

ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪರಿಸರದ ಬಗ್ಗೆ ಪ್ರಬಂಧ, ಚಿತ್ರಕಲೆ



ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ, ಕೃಷಿ ಮೇಲ್ವಿಚಾರಕ ಮಹದೇವ್ ಪ್ರಸಾದ್ ಬಹುಮಾನಗಳನ್ನು ನೀಡಿದರು. ನಂತರ ಕಾಲೇಜು ಆವರಣದಲ್ಲಿ ಹಲವಾರು ಗಿಡಗಳನ್ನು ನೆಡಲಾಯಿತು.

ಕಾಲೇಜಿನ ಉಪನ್ಯಾಸಕಿ ನೇತ್ರಾವತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಲಯದ ಮೇಲ್ವಿಚಾರಕ ಸುಜಿತ್, ಸೇವಾ ಪ್ರತಿನಿಧಿಗಳಾದ ಭಾಗ್ಯ, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪರಿಸರ ಜಾಗೃತಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕೃಷಿ ಮೇಲ್ವಿಚಾರಕ ಮಹದೇವ್ ಪ್ರಸಾದ್ ಬಹುಮಾನ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ ಇದ್ದರು.



**ಹಾಸನ: ತಾಲ್ಲೂಕಿನ ಮೆಳಗೋಡು ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರವನ್ನು ಆಯೋಜಿಸಲಾಗಿದ್ದು, ಅ.16ರಿಂದ ಅ.22 ರ ವರೆಗೆ ನಡೆಯುವ ಶಿಬಿರದ ಉದ್ಘಾಟನೆಯನ್ನು ನಗರದ ಪಶು ವೈದ್ಯಕೀಯ ಮಹಾವಿದ್ಯಾಲಯ ಡೀನ್ ಡಾ. ಓ.ಆರ್.ನಟರಾಜು ನೆರವೇರಿಸಿದರು. ಶಿಬಿರಾರ್ಥಿಗಳು ಗ್ರಾಮದಲ್ಲಿ ಶ್ರಮದಾನ ಕೈಗೊಂಡು ಗ್ರಾಮದ ಆಂಜನೇಯ ದೇವಾಲಯಗಳ ಆವರಣವನ್ನು ಸ್ವಚ್ಛ ಮಾಡಿದರು. ರಸ್ತೆಗಳು ಹಾಗೂ ಚರಂಡಿಗಳನ್ನು ಶುಚಿಗೊಳಿಸಿ, ಗ್ರಾಮಸ್ಥರಲ್ಲಿ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸಿದರು.**

**ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಎಚ್ ಲೋಕೇಶ್, ಪಿಡಿಓ ಶೈಲಾ, ಗ್ರಾಮಸ್ಥರಾದ ಯಾಲಕ್ಕಿಗೌಡ, ಗುರುರಾಜ್, ಮೋಹನ್, ವೆಂಕಟಶೆಟ್ಟಿ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.**

# ದಣಿವರಿಯದ ನಾಯಕ ಪ್ರಧಾನಿ ಮೋದಿ

• ಪ್ರಜೋದಯ ವರದಿ

**ಆಲೂರು:** ಬಿಜೆಪಿ ಪಕ್ಷ ಎಂದಿಗೂ ಅಧಿಕಾರ ಅಥವಾ ಚುನಾವಣೆಗಾಗಿ ದುಡಿಯುವ ಪಕ್ಷವಲ್ಲ. ಜನಸಾಮಾನ್ಯರ ಒಳಿತಿಗಾಗಿ ಹೋರಾಡುವ ಪಕ್ಷ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದ ತಾಲ್ಲೂಕು ಬಿಜೆಪಿ ಕಚೇರಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಜೀಯವರ 75 ನೇ ವರ್ಷದ ಜನ್ಮದಿನದ ಅಂಗವಾಗಿ, ಬುಧವಾರ ಸೇವಾ ಪಾಕ್ಷಿಕ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದಣಿವರಿಯದ ನಾಯಕ ನಮ್ಮ ದೇಶದ ನೆಚ್ಚಿನ ಪ್ರಧಾನ ಮಂತ್ರಿ ನರೇಂದ್ರ ಮೋದಿಜೀಯವರು ದೇಶಕ್ಕೋಸ್ಕರ ಒಂದು ದಿನವೂ ರಜೆ



ಪಡೆಯದೆ ದಿನದ 18 ಗಂಟೆಗಳ ಕಾಲ ನಿರಂತರವಾಗಿ ಶ್ರಮಿಸುತ್ತಿರುವ ಏಕೈಕ ನಾಯಕ. ದೇಶಾದ್ಯಂತ ಇಂದಿನಿಂದ ಪ್ರಾರಂಭವಾಗಿ ಮಹಾತ್ಮಾ ಗಾಂಧೀಜಿ ಜಯಂತಿಯವರೆಗೆ ಬಿಜೆಪಿ ಹಲವಾರು ಸೇವಾ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಅದರಂತೆ ಇಂದು ಜಿಲ್ಲೆಯಲ್ಲೆಡೆ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ರಾಷ್ಟ್ರ ನಾಯಕರ ಸೂಚನೆಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ರಕ್ತದಾನ, ಆರೋಗ್ಯ ತಪಾಸಣೆ ಶಿಬಿರ, ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಅಭಿಯಾನ, ಗಿಡನೆಡುವ ಅಭಿಯಾನದಂತಹ ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ, ಸ್ವಚ್ಛತಾ ಅಭಿಯಾನ, ತಾಯಿ ಹೆಸರಿನಲ್ಲಿ ಒಂದು ಸಸಿ ನೆಡುವುದು, ಕ್ರೀಡೆ ಹಾಗೂ ಚಿತ್ರಕಲಾ ಸ್ಪರ್ದೆಯಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಆಲೂರು-ಕಟ್ಟಾಯ ಮಂಡಲದ ಬಿಜೆಪಿ ಅಧ್ಯಕ್ಷೆ ಉಮಾ ರವಿಪ್ರಕಾಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಕೃಷ್ಣ ಅಬ್ಬನ, ಮುಖಂಡರಾದ ಎ. ಹೆಚ್. ರಮೇಶ್, ರಾಜ್ ಕುಮಾರ್, ಕದಾಳು ಲೋಕೇಶ್ ಉಪಸ್ಥಿತರಿದ್ದರು.

# ಕೌಶಲ ತರಬೇತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 6,7,8,9 ಮತ್ತು 11 ನೇ ತರಗತಿಯ ವಿದ್ಯಾರ್ಥಿನಿಯರಿಗೆ ಕರಾಟೆ- ಸ್ವಯಂ ರಕ್ಷಣಾ ಕೌಶಲ ತರಬೇತಿ ನೀಡಲು ನುರಿತ ಕರಾಟೆ ಮಹಿಳಾ ತರಬೇತಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಆಸಕ್ತರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹ ಅಭ್ಯರ್ಥಿಗಳು ಕರಾಟೆ ತರಗತಿಯ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲೆಗಳನ್ನು ಅರ್ಜಿಯೊಂದಿಗೆ ಸೆ.22 ರೊಳಗೆ ಜಿಲ್ಲಾಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಆಕಾಶವಾಣಿ ಹಿಂಭಾಗ, ಸಾಲಗಾಮೆ ಮುಖ್ಯ ರಸ್ತೆ, ಹಾಸನ ಇಲ್ಲಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆಕಾಶವಾಣಿ ಹಿಂಭಾಗ, ಹಾಸನ. ದೂರವಾಣಿ ಸಂಖ್ಯೆ: 08172- 268373, 08172- 267373 ಗೆ ಸಂಪರ್ಕಿಸಬಹುದಾಗಿದೆ. ಅಥವಾ ಆಯಾ ತಾಲ್ಲೂಕು ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳ ಬಗ್ಗೆ ಪೋಷಕರು ನಿಗಾ ವಹಿಸಿ | ಪ್ರವಾದಿ ಮೊಹಮ್ಮದ್ ಮುಸ್ತಫಾ 1500ನೇ ಜನ್ಮ ದಿನಾಚರಣೆ

# ಜಾತಿ, ಧರ್ಮ ಬದಿಗಿಟ್ಟು ವ್ಯಸನದ ವಿರುದ್ಧ ಒಗ್ಗೂಡಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ಜಾತಿ, ಧರ್ಮ, ವರ್ಗವನ್ನೇ ಬದಿಗಿಟ್ಟು ವ್ಯಸನದ ವಿರುದ್ಧ ಸಮಾಜ ಒಗ್ಗೂಡಬೇಕಿದೆ ಎಂದು ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಯಾದ್ಗಾರ್ ಇಬ್ರಾಹಿಂ ಹೇಳಿದರು.

ಪಟ್ಟಣದ ಶ್ರೀನಿವಾಸ ಕನ್ವೆನ್ಷನ್ ಸಭಾಂಗಣದಲ್ಲಿ ನಡೆದ ಪ್ರವಾದಿ ಮೊಹಮ್ಮದ್ ಮುಸ್ತಫಾ ಅವರ 1500ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರವಾದಿಯವರ ಸಂದೇಶಗಳು ಮನುಷ್ಯರಲ್ಲಿ ಪ್ರೀತಿ, ತ್ಯಾಗ, ಶಾಂತಿ ಹಾಗೂ ಬಲಿದಾನದ ಮೌಲ್ಯಗಳನ್ನು ಬೆಳೆಸುವುದರೊಂದಿಗೆ ಸಮಾಜವನ್ನು ಸುಸಂಸ್ಕೃತಗೊಳಿಸುವುದೇ ಉದ್ದೇಶವೆಂದರು.

ಮಾದಕವಸ್ತುಗಳು, ಮದ್ಯಪಾನ, ವೇಶ್ಯಾವಾಟಿಕೆಗಳನ್ನು ನಿಷೇಧಿಸುವುದರೊಂದಿಗೆ ಆರೋಗ್ಯಕರ ಜೀವನವನ್ನು ಪ್ರೋತ್ಸಾಹಿಸಿ, ಎಲ್ಲರಿಗೂ ಜ್ಞಾನವನ್ನು



ಪಡೆಯುವಂತೆ ತಿಳಿಸಿದ ಶ್ರೇಷ್ಠ ಸಮಾಜ ಸುಧಾರಕ ಪ್ರವಾದಿ ಮುಹಮ್ಮದರು ಎಂದು ಹೇಳಿದರು.

ಪ್ರವಾದಿಯವರ ಸಂದೇಶವೇನು? ಪ್ರೀತಿ, ತ್ಯಾಗ, ಬಲಿದಾನ. ಹಸಿದವನಿಗೆ ಅನ್ನ ನೀಡದೆ ಸಾಯಲು ಕಾರಣವಾದವನು ನರಕಕ್ಕೆ ಹೋಗಿದ್ದಾನೆ. ಆದರೆ ನಾಯಿಗೆ ನೀರು ಕೊಟ್ಟವನು ಸ್ವರ್ಗವನ್ನು ಪಡೆದಿದ್ದಾನೆ ಎಂಬುದೂ ಇಸ್ಲಾಂ ಹೇಳುತ್ತದೆ. ಇಸ್ಲಾಂ ಎಂದರೆ ಶಾಂತಿ, ಮುಸ್ಲಿಂ ಎಂದರೆ ಶಾಂತಿಯನ್ನು ಅನುಸರಿಸುವವನು

ಇಂದಿನ ಕಾಲಘಟ್ಟದಲ್ಲಿ ಮಕ್ಕಳ ಭವಿಷ್ಯ ಗಂಭೀರ ಸವಾಲಿನ ಎದುರಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಗಾಂಜಾ ಸೇರಿದಂತೆ ಅನೇಕ ವ್ಯಸನಗಳು ಹಳ್ಳಿಯಿಂದ ನಗರದ ವರೆಗೂ, ಕಾಲೇಜು ಕ್ಯಾಂಪಸ್‌ಗಳ ವರೆಗೂ ತಲುಪಿರುವುದನ್ನು ವಿಷಾದಿಸಿದ ಅವರು, ಇತ್ತೀಚೆಗೆ ಒಬ್ಬ ಮಹಿಳೆ ಜಿಲ್ಲಾಧಿಕಾರಿಗಳಿಗೆ ತನ್ನ ನೋವನ್ನು ಹಂಚಿಕೊಂಡಿದ್ದಳು. ಮಗ ಮನೆಯಿಂದ ಹೊರಟು ಅಕ್ಕಿಯನ್ನು ಮಾರಿಕೊಂಡು ಗಾಂಜಾ ಸೇವನೆಗೆ ಹಣ ಪೂರೈಸುತ್ತಿದ್ದ. ಅಮ್ಮನ ಸಾಮಾನುಗಳನ್ನೂ ಕದ್ದುಕೊಂಡು ಹೋಗುತ್ತಿದ್ದ ಎಂದು ಉದಾಹರಣೆ ನೀಡಿದರು.

ಮಕ್ಕಳು ಮಸೀದಿಯಲ್ಲಿದ್ದೇವೆ, ದರ್ಗಾದಲ್ಲಿದ್ದೇವೆ ಎಂದು ಮನೆಗೆ ಸುಳ್ಳು ಹೇಳಿ ಗದ್ದೆಗಳಲ್ಲಿ ನಿಂತುಕೊಂಡು ಗಾಂಜಾ ಸೇವಿಸುತ್ತಿರುವುದನ್ನು ಅನ್ಯಧರ್ಮೀಯರೇ ನನಗೆ ತೋರಿಸಿದರು. ನಾವು ಮಕ್ಕಳ ಬಗ್ಗೆ ಹೆಮ್ಮೆಪಡುತ್ತೇವೆ, ಆದರೆ ನಿಜವಾಗಿ ಅವರು ಎಲ್ಲಿ ತೊಡಗಿಕೊಂಡಿದ್ದಾರೆ ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ ಎಂದು ಪೋಷಕರಿಗೆ ಎಚ್ಚರಿಕೆ ನೀಡಿದರು.

ಇಂದಿನ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿಗಾಗಿ ಮನುಷ್ಯರಲ್ಲಿ ದ್ವೇಷದ ಬೀಜ ಬಿತ್ತಲು ಯತ್ನಿಸುತ್ತಿರುವುದನ್ನು ಅವರು ಟೀಕಿಸಿದರು. ಒಂದು ಧಾರ್ಮಿಕ ಮೆರವಣಿಗೆಯಲ್ಲಿ ನಡೆದ ತಪ್ಪಿಗಾಗಿ ಇಡೀ ಸಮುದಾಯವನ್ನು ತಪ್ಪು ಮಾಡಲಾಗುತ್ತಿದೆ. ಇದು ಸರಿಯಲ್ಲ. ಪ್ರವಾದಿ ಮಹಮ್ಮದ್ ಅವರ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಕ್ಕಳನ್ನು ಮಾದರಿ ಮಕ್ಕಳನ್ನಾಗಿ ರೂಪಿಸಬಹುದು. ಅವರಿಗೆ ಉತ್ತಮ ಶಿಕ್ಷಣ, ಉತ್ತಮ ದಾರಿ ನೀಡಿದರೆ ಭಾರತವನ್ನು ಜಗತ್ತಿನಲ್ಲಿ ಎತ್ತಿಹಿಡಿಯಲು ಸಾಧ್ಯ ಎಂದು ಕರೆ ನೀಡಿದರು.

ಬದ್ರಿಯಾ ಜುಮ್ಮಾ ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷ ಯಾದ್ಗಾರ್ ಜಾಕೀರ್, ಉಪಾಧ್ಯಕ್ಷ ಆದಂ ಹಾಜಿ, ಕಾರ್ಯದರ್ಶಿ ಅಲೀಲ್ ಅಕ್ಬರ್, ಹಾಜಿ ಮಹಮ್ಮದ್, ಹಾಜಿ ಅಹಮದ್ ಬಾವಾ, ಖತೀಬ್ ಅಬ್ದುಲ್ ರಝಾಕ್ ಸಖಾಫಿ, ಉಸ್ತಾದ್‌ಗಳಾದ ರಫೀಕ್ ಸೌದಿ, ಸದಸ್ಯರಾದ ಹೈದರ್, ಅಬ್ದುಲ್ ಲತೀಫ್, ಮಜೀದ್, ಸಲೀಂ, ಮುಸ್ತಾಫಾ, ಸೌಕತ್ ಇನ್ನಿತರರು ಉಪಸ್ಥಿತರಿದ್ದರು.

# ನವೋದಯ ಪ.ಪೂ. ಕಾಲೇಜಿಗೆ ಸಮಗ್ರ ಪ್ರಶಸ್ತಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರಕೃತಿ ನಮಗೆ ಸಿಕ್ಕಿರುವ ದೈವದತ್ತ ವರ, ಇದನ್ನು ನಾವುಗಳು ನಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಹಾಳು ಮಾಡುತ್ತಿದ್ದೇವೆ. ಪ್ರಕೃತಿ ಇದ್ದರಷ್ಟೆ ನಮ್ಮ ಉಳಿವು ಎಂಬುದನ್ನು ಮರೆತಿದ್ದೇವೆ. ಹಾಳು ಮಾಡಿರುವ ಪ್ರಕೃತಿಯನ್ನು ಮರುಸೃಷ್ಟಿ ಮಾಡುವ ಜವಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಚಂದ್ರಶೇಖರ್ ಹೇಳಿದರು.

ಪಟ್ಟಣದ ನವೋದಯ ವಿದ್ಯಾಸಂಸ್ಥೆಯೂ 2025-26ನೇ ಸಾಲಿನ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಹಿನ್ನಲೆಯಲ್ಲಿ ಕಾಲೇಜು ಆಡಳಿತ ಮಂಡಳಿಯೂ ಏರ್ಪಡಿಸಿದ್ದ ಅಭಿನಂಧನಾ ಸಮಾರಂಭ ಮತ್ತು ಪೋಷಕರ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದು ವಿಶ್ವ ಓಝೋನ್ ದಿನವಾಗಿದೆ, ಸೂರ್ಯನ ವಿಷಕಾರಕ ಕಿರಣಗಳು ಭೂಮಿಗೆ ನೇರವಾಗಿ ತಲುಪುವುದನ್ನು ತಡೆಯುವ ಪರಿಸರದಲ್ಲಿರುವ ಮುಖ್ಯವಾದ ಪದರ, ಇದನ್ನೀಗ ನಾವು ನಮ್ಮ ಐಷಾರಾಮಿ ಬದುಕಿನಿಂದಾಗಿ ಹಾಳು ಮಾಡುತ್ತಿದ್ದೇವೆ ಎಂದು ವಿಷಾದಿಸಿದರು.

ನವೋದಯ ವಿದ್ಯಾಸಂಘದ ಅಧ್ಯಕ್ಷ ಸಿ.ಜೆ.ಮಂಜುನಾಥ್, ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿ ಶರತ್ ಕೆಂಬಾಳು ಗೌರವಾಧ್ಯಕ್ಷ ಡಾ. ಶೇಷಶಯನ, ನಿರ್ದೇಶಕರುಗಳಾದ ಓ.ಆರ್.ರಂಗೇಗೌಡ, ಗೋವಿಂದ್ ರಾಜ್, ಕೆ.ಎಲ್.ಶಿವಕುಮಾರ್, ರಾಘವೇಂದ್ರ, ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಇದ್ದರು.

ಸಾಧನೆ ಮಾಡಿದ ಮಕ್ಕಳನ್ನು ಆಡಳಿತ ಮಂಡಳಿ ಅಭಿನಂಧಿಸಿತು.

## ಬಾಗಿಲು ತೆರೆಯದ ಎಂಸಿಇ ಅಧ್ಯಕ್ಷರ ಕೊಠಡಿ

» ಮೊದಲನೇ ಪುಟದಿಂದ

ಆರ್.ಟಿ.ದ್ಯಾವೇಗೌಡ ಬಣದವರು ಜಿಲ್ಲಾ 6ನೇ ಸೆಷನ್ಸ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರೆ ಅದಕ್ಕೂ ಮೊದಲೇ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಬಣದವರು ಜಿಲ್ಲಾ ನ್ಯಾಯಾಲಯದ ಜೊತೆಗೆ ಹೈಕೋರ್ಟ್‌ನಲ್ಲೂ ಕೇವಿಯಟ್ ಸಲ್ಲಿಸಿದ್ದಾರೆ.

ಈ ನಡುವೆ ರಿಜಿಸ್ಟ್ರಾರ್ ಅವರ ಆದೇಶದಂತೆ ನಾವು ಆಡಳಿತ ನಡೆಸಲು ಅನುವು ಮಾಡಿಕೊಡಬೇಕು. ಅದಕ್ಕಾಗಿ ಆಡಳಿತ ಮಂಡಳಿ ಕಚೇರಿಯ ಬಾಗಿಲು ತೆಗೆಸಿಕೊಡಬೇಕೆಂದು ಬಿ. ಆರ್.ಗುರುದೇವ್ ಹಾಗೂ ಇತರರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದಾರೆ. ಆದರೆ, ರಿಜಿಸ್ಟ್ರಾರ್ ಅವರು ನೀಡಿರುವ ಆದೇಶದಲ್ಲಿ ಸ್ವಲ್ಪ ಗೊಂದಲವಿದ್ದು, ಸ್ಪಷ್ಟನೆ ಸಿಗುವವರೆಗೂ ಯಾವುದೇ ರೀತಿಯಲ್ಲೂ ಮುಂದುವರಿಯುವುದಿಲ್ಲವೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಸ್ಪಷ್ಟಪಡಿಸಿದ್ದಾರೆ.

# ಸಿ, ಡಿ ಶ್ರೇಣಿಗೆ ಮೇಲ್ಪಟ್ಟವರ ಮುಂಬಡ್ತಿಗೆ ತರಬೇತಿ ಕಡ್ಡಾಯ

## ಸಚಿವ ಸಂಪುಟದಲ್ಲಿ ನಿರ್ಣಯ | ಆಕ್ಷೇಪಣೆಗೆ ಸಲ್ಲಿಕೆಗೆ 15 ದಿನ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು:** ಅಧಿಕಾರಿಗಳು (ಸಿ ಮತ್ತು ಡಿ ಶ್ರೇಣಿಗೆ ಮೇಲ್ಪಟ್ಟವರು) ಮುಂಬಡ್ತಿ ಪಡೆಯ ಬೇಕಾದರೆ ಇನ್ನು ಮುಂದೆ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಸಭೆಯ ಬಳಿಕಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರು, ಕರ್ನಾಟಕ ರಾಜ್ಯ ನಾಗರಿಕ ಸೇವಾ (ಮುಂಬಡ್ತಿ ತರಬೇತಿ ಕಡ್ಡಾಯ) ನಿಯಮ, 2025ರ ಕರಡು ನಿಯಮ ಪ್ರಕಟಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ಒಂದು ವೇಳೆ ಕರಡು ನಿಯಮಗಳಿಗೆ ಯಾವ ಆಕ್ಷೇಪಣೆ, ಸಲಹೆಗಳು ಬಾರದಿದ್ದರೆ ನಿಯಮದ ಜಾರಿಗೆ ಅಧಿಕೃತ ಆದೇಶ ಹೊರಡಿಸಲಾಗುವುದೆಂದರು.

**ಕರಡು ಹೇಳುವುದೇನು**

ಸರ್ಕಾರದಲ್ಲಿ ಸಚಿವಾಲಯ ಸೇರಿ 100ಕ್ಕೂ ಹೆಚ್ಚು ಇಲಾಖೆ, ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ. ಅಧಿಕಾರಿಗಳು ತಾವು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ನಂತರದ ಹುದ್ದೆಗೆ ಮುಂಬಡ್ತಿ ಪಡೆಯಲು ಆಯಾ ಇಲಾಖೆಗಳು ನಿಗದಿ ಪಡಿಸಿರುವ ತರಬೇತಿ ಮಾಡ್ಯೂಲ್‌ಗಳಲ್ಲಿ ಕನಿಷ್ಠ 15 ದಿನಗಳ ತರಬೇತಿ ಪಡೆಯಬೇಕು. ಪ್ರತಿ ಉದ್ಯೋಗಿಯು ಇಲಾಖಾ ಮುಖ್ಯಸ್ಥರು ನಿರ್ದೇಶಿಸಿದ ಕೋರ್ಸ್‌ಗಳಲ್ಲಿ ಪ್ರತಿವರ್ಷ ನಿಗದಿ ಪಡಿಸಿದ ಕನಿಷ್ಟ ಆನ್‌ಲೈನ್ ತರಬೇತಿ ಪಡೆಯಬೇಕೆಂದು ತಿಳಿಸಿದರು.

ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮಿಡ್ ಟರ್ಮ್ ಕರಿಯರ್ ಟ್ರೈನಿಂಗ್ ವ್ಯವಸ್ಥೆ ಇದೆ. ರಾಜ್ಯದಲ್ಲೂ ಸರ್ಕಾರಿ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ನಿರಂತರವಾಗಿ ಹೆಚ್ಚಿಸಲು ಅದೇ ರೀತಿಯಲ್ಲಿ ತರಬೇತಿ ಕಡ್ಡಾಯ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗ 2 ತನ್ನ 7ನೇ ವರದಿಯಲ್ಲೂ ಪದೋನ್ನತಿಗೆ ಕಡ್ಡಾಯವಾಗಿ ತರಬೇತಿ ನೀಡಬೇಕೆಂದು ಶಿಫಾರಸು ಮಾಡಿದೆ. ತರಬೇತಿಯು ಸಿಬ್ಬಂದಿ ಸಾಮರ್ಥ್ಯ ವರ್ಧನೆಯ ಪ್ರಮುಖ ಭಾಗವಾಗಿದೆ. ಇದರಿಂದ ಅಧಿಕಾರಿ ಸಿಬ್ಬಂದಿ ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡುತ್ತದೆ. ಪ್ರತಿವರ್ಷ ಹೊಸ ಕಾನೂನು, ನಿಯಮ, ಯೋಜನೆ, ಕಾರ್ಯಕ್ರಮ, ಮಾಹಿತಿ ತಂತ್ರಜ್ಞಾನ ಇತ್ಯಾದಿಗಳನ್ನು ಪರಿಚಯಿಸಲಾಗುತ್ತಿದೆ. ಅದನ್ನು ತಿಳಿದುಕೊಂಡು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿ ಸಲು ಮತ್ತು ನಾಗರಿಕರಿಗೆ ಸೇವೆಗಳನ್ನು ಸುಲಭವಾಗಿ ತಲುಪಿಸಲು ನಾಗರಿಕ ಸೇವಾ ಸಿಬ್ಬಂದಿ ಹೊಸ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳುವುದು ಮತ್ತು ತರಬೇತಿ ಪಡೆಯುವುದು ಅವಶ್ಯ ಎಂದರು.

### ಲೋಕಸೇವಾ ಆಯೋಗದ ವರದಿ ಮಂಡನೆ

ಕರ್ನಾಟಕ ಲೋಕಸೇವಾ ಆಯೋಗ ತನ್ನ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆಯೆಂದು ಪಾಟೀಲ್ ಹೇಳಿದರು.

ಬಳ್ಳಾರಿ, ವಿಜಯಪುರ, ಧಾರವಾಡ, ಶಿವಮೊಗ್ಗಾ, ಬೆಳಗಾವಿ, ಮೈಸೂರು, ಕಲಬುರಗಿ ಮತ್ತು ತುಮಕೂರು ಜಿಲ್ಲೆಗಳ ಕೇಂದ್ರ ಕಾರಾಗೃಹಗಳಲ್ಲಿ ಅಂದಾಜು 16.75 ಕೋಟಿ ರೂ. ವೆಚ್ಚದಲ್ಲಿ 10 ಕರೆ ನಿರ್ಬಂಧಿಸುವ ವ್ಯವಸ್ಥೆಯ ಗೋಪುರ ಸ್ಥಾಪಿಸಲು ಸಂಪುಟ ಅನುಮೋದನೆ ನೀಡಿದೆಯೆಂದರು.

ದೌರ್ಜನ್ಯದಿಂದ ಸಾವನ್ನಪ್ಪಿದ ಪರಿಶಿಷ್ಟ ಜಾತಿ/ಪಂಗಡದ ವ್ಯಕ್ತಿಗಳ ಅವಲಂಬಿತರಿಗೆ ಗ್ರೂಪ್–ಸಿ ಮತ್ತು ಗ್ರೂಪ್–ಡಿ ಕೇಡರ್ ಹುದ್ದೆಗಳಲ್ಲಿ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಲು ಅನುಮೋದನೆ ನೀಡಿದೆ.

ಬಡ್ತಿ ಪಡೆಯಲು ಅಧಿಕಾರಿಗಳು/ಉದ್ಯೋಗಿಗಳಿಗೆ ತರಬೇತಿ ಕಡ್ಡಾಯಗೊಳಿಸುವ ಬಗ್ಗೆಯೂ ಸಂಪುಟ ಚರ್ಚಿಸಿದೆ. ಈ ನಿಟ್ಟಿನಲ್ಲಿ ಕರಡು ನಿಯಮಗಳನ್ನು ಸಿದ್ಧಪಡಿಸಲು ಮತ್ತು ಅಂತಿಮಗೊಳಿಸುವ ಮೊದಲು ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿದೆ ಎಂದರು.

## ಗಾಯಕ ಜನ್ನಿ-ಶೂದ್ರ ಶ್ರೀನಿವಾಸ್‌ಗೆ ಡಾ.ಸಿದ್ದಲಿಂಗಯ್ಯ ದತ್ತಿ ಪ್ರಶಸ್ತಿ



» ಮೊದಲನೇ ಪುಟದಿಂದ

ಅವರು ಬೂಸಾ ಪ್ರಕರಣ ನಡೆದಿತ್ತು ಎಂದರು.

ಶೂದ್ರ ಪತ್ರಿಕೆಯಲ್ಲಿ ಎಲ್ಲಾ ಕವಿತೆ ಪ್ರಕಟಿಸಿದೆ, ಬೇರೆಲ್ಲೂ ಪ್ರಕಟ ಆಗಲಿಲ್ಲ. ನಂತರ ಪುಸ್ತಕವಾಗಿಸಿ ಪ್ರಕಟಿಸಿ ಹೆಸರು ಕೊಡುವಾಗ ಮುನ್ನುಡಿ ಬರೆಸುವುದು ಕಷ್ಟವಾಯಿತು. ಕಡೆಗೆ ಡಾ.ಕೆ.ವಿ.ನಾರಾಯಣ ಬರೆದರು. ಪುಸ್ತಕ ಪ್ರಕಟವಾದ ಮೇಲೆ ಹೊಸ ಚಿಂತನೆ ತಲುಪಿಸಲು ಸಾಕಷ್ಟು ಕಷ್ಟಪಟ್ಟೆವು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಹಾಸನ ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅಭಿನಂದನಾ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ರಮಾಕುಮಾರಿ ಸಿದ್ದಲಿಂಗಯ್ಯ, ಡಾ.ಮಾನಸ ಸಿದ್ದಲಿಂಗಯ್ಯ ಪಾಲ್ಗೊಂಡಿದ್ದರು.

ಕೇಂದ್ರ ಕಸಾಪ ಗೌರವ ಕಾರ್ಯದರ್ಶಿಗಳಾದ ಬಿ.ಎಂ.ಪಟೇಲ್ ಪಾಂಡು, ಹೆಚ್.ಬಿ.ಮದನಗೌಡ, ಗೌರವ ಕೋಶಾಧ್ಯಕ್ಷ ಡಿ.ಆರ್.ವಿಜಯಕುಮಾರ್, ಚನ್ನರಾಯಪಟ್ಟಣ ತಾಲ್ಲೂಕು ಕಸಾಪ ಅಧ್ಯಕ್ಷ ಲೋಕೇಶ್ ಹಡೇನಹಳ್ಳಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ, ನಾಗೇಶ್ ಎಂ.ಡಿ., ಡಾ.ಯುವರಾಜ್, ಜಾವಗಲ್ ಪ್ರಸನ್ನ ಕುಮಾರ್, ಶ್ರವಣಬೆಳಗೊಳ ಕಸಾಪ ಅಧ್ಯಕ್ಷ ನಾಗೇಂದ್ರ ರಾಯ ಮೊದಲಾದವರಿದ್ದರು.

## ಶಾಲಾ-ಕಾಲೇಜು ತೊರೆದ ನೀಲಗಿರಿ ಕಾವಲು ಮಕ್ಕಳು

• ಮೊದಲನೇ ಪುಟದಿಂದ

ಕನಿಷ್ಠ ವ್ಯವಸ್ಥೆಯೂ ಇಲ್ಲ. ಹೀಗಾಗಿ ಎಷ್ಟೋ ಪೋಷಕರು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿದ್ದಾರೆ.

**ಪ್ರತಿಯೊಂದಕ್ಕೂ ಜಾವಗಲ್ ಅವಲಂಬನೆ**

ನೀಲಗಿರಿ ಗ್ರಾಮಸ್ಥರು ಪ್ರತಿಯೊಂದಕ್ಕೆ 8 ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ ಜಾವಗಲ್ ಅನ್ನು ಅವಲಂಬಿಸಿದ್ದಾರೆ. ಪ್ರೌಢಶಾಲೆ, ಕಾಲೇಜು ವ್ಯಾಸಂಗ ಬೇಕೆಂದರೆ ನಿತ್ಯ 3 ಕಿ.ಮೀ. ಬಂದೂರು ಗೇಟ್‌ವರೆಗೆ ನಡೆಯಬೇಕು, ನಂತರ 5 ಕಿ.ಮೀ. ಸಾರಿಗೆ ಬಸ್ ನೆರವಿನಿಂದ ತೆರಳಬೇಕು. ಎಸ್‌ಎಸ್‌ಎಲ್‌ಸಿ ಹಾಗು ಪಿಯು ವಿದ್ಯಾರ್ಥಿಗಳು ಸಂಜೆ ತರಗತಿ ಮುಗಿಸಿ ಬರುವುದು ತಡವಾಗುವುದರಿಂದ ಪೋಷಕರು ಮಕ್ಕಳು ಮನೆ ತಲುಪುವ ತನಕ ದಾರಿ ಕಾಯುವ ಪರಿಸ್ಥಿತಿ ಇದೆ. ಬಂದೂರು ಗ್ರಾಮ ಪಂಚಾಯಿತಿಗೆ ಸೇರುವ ಈ ಗ್ರಾಮದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ ಎನ್ನುವುದು ಬಿಟ್ಟರೆ ಉಳಿದಂತೆ ಕುಗ್ರಾಮದಂತೆಯೇ ಇದೆ.

**ಗಮನ ಹರಿಸದ ಶಾಸಕ**

ಬೇಲೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಗೆ ಸೇರಿರುವ ಗ್ರಾಮಕ್ಕೆ ಮೂಲಸೌಕರ್ಯ ಕಲ್ಪಿಸುವಂತೆ ಶಾಸಕ ಹೆಚ್.ಕೆ.ಸುರೇಶ್ ಹಾಗು ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಸುರೇಶ್ ಅವರು 2023ರ ವಿಧಾನಸಭೆ ಚುನಾವಣೆಯಲ್ಲಿ ಮತ ಕೇಳುವುದಕ್ಕಾಗಿ ಬಂದವರು ವಾಪಾಸ್ ಇತ್ತ ದೃಷ್ಟಿ ಹರಿಸಿಲ್ಲ. ಸೌಕರ್ಯ ಕಲ್ಪಿಸುವಂತೆ ಎಷ್ಟೋ ಸಲ ಮನವಿ ಮಾಡಿದರೂ ನಿರ್ಲಕ್ಷ್ಯ ವಹಿಸಿದ್ದಾರೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಗೊರೂರು ಹಾಗು ಶ್ರವಣ ಬೆಳಗೊಳ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಓಮಿನಿ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹೆಣವನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಟ್ಟಾಯ ಹೋಬಳಿ ಚಿಕ್ಕನಾಯಕನಹಳ್ಳಿ ಗ್ರಾಮದ ಸ್ವಾಮಿಗೌಡ (52) ಮೃತರು. ಪದುಮನಹಳ್ಳಿ ಹಿಟ್ಟಿನ ಗಿರಣಿಗೆ ತೆರಳಿದ್ದ ಅವರು ಮನೆಗೆ ವಾಪಾಸ್ಸಾಗುತ್ತಿದ್ದಾಗ ಅರಕಲಗೂಡು ಕಡೆಯಿಂದ ವೇಗವಾಗಿ ಬಂದ ಓಮಿನಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ತಲೆ ಹಾಗು ದೇಹದ ಭಾಗಗಳಿಗೆ ಗಂಭೀರ ಗಾಯಗಳಾಗಿ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಎಕ್ಸ್ ಎಲ್ ಮೊಪೆಡ್‌ನಿಂದ ಬಿದ್ದು ಸವಾರ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ಚಿಕ್ಕಬಿಳ್ತಿ ಸಮೀಪ ನಡೆದಿದೆ.

ಚನ್ನರಾಯಪಟ್ಟಣದ ಬಲರಾಮೇಗೌಡ (60) ಮೃತರು. ತಮ್ಮ ಮೊಪೆಡ್ ಬೈಕ್‌ನಲ್ಲಿ ಶ್ರವಣೂರಿಗೆ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ತೀವ್ರ ರಕ್ತಸ್ರಾವವಾದ ಹಿನ್ನಲೆ ಮೃತಪಟ್ಟಿದ್ದಾರೆ.



**ಹಾಸನ: ನಗರದ ಹಿಮ್ಸ್‌ನಲ್ಲಿ ಮಹಿಳೆಯೊಬ್ಬರು ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಪ್ರಸೂತಿ ತಜ್ಞ ವೈದ್ಯೆ ಡಾ|| ನ್ಯಾನ್ಸಿ ಪೌಲ್ ಅವರು ಗುರುವಾರ ಬೆಳಿಗ್ಗೆ 11.04, 11.04 ಮತ್ತು 11.05 ನಿಮಿಷಕ್ಕೆ ಮೂರು ಮಕ್ಕಳನ್ನು ಯಶಸ್ವಿಯಾಗಿ ಹೆರಿಗೆ ಮಾಡಿಸಿದ್ದಾರೆ. ಈ ಪೈಕಿ ಒಂದು ಗಂಡು ಮಗು, ಇಬ್ಬರು ಹೆಣ್ಣು ಕೂಸುಗಳಾಗಿವೆ. ತಾಯಿ-ಮಕ್ಕಳು ಆರೋಗ್ಯವಾಗಿದ್ದಾರೆಂದು ವೈದ್ಯರು ತಿಳಿಸಿದ್ದಾರೆ.**

## ರಾಷ್ಟ್ರ ಮಟ್ಟಕ್ಕೆ ದೇಶ್ನಾ ಆಯ್ಕೆ



• ಪ್ರಜೋದಯ ವರದಿ

**ಹಾಸನ:** ಮಂಗಳೂರಿನಲ್ಲಿ ಜೈ ಹಿಂದ್ ಈಜು ಕ್ಲಬ್ ಆಯೋಜಿಸಿದ್ದ 2025–26 ನೇ ಸಾಲಿನ ರಾಜ್ಯ ಮಟ್ಟದ ಬೈ–ಫಿನ್ ಈಜು ಸ್ಪರ್ಧೆಯಲ್ಲಿ ನಗರದ ಸುಜಲ ಕಾಲೇಜಿನ ವಿದ್ಯಾರ್ಥಿನಿ ದೇಶ್ನಾ ಪಿ.ಶೆಟ್ಟಿ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

50 ಹಾಗೂ 100 ಮೀಟರ್ ಫ್ರೀ ಸ್ಟೈಲ್ ನಲ್ಲಿ ಪ್ರಥಮ, 200ಮೀಟರ್ ಫ್ರೀಸ್ಟೈಲ್ ನಲ್ಲಿ ದ್ವಿತೀಯ ಮತ್ತು ಮಹಿಳೆಯರ ಮುಕ್ತ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಅದೇ ರೀತಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದಲ್ಲಿ 100 ಹಾಗೂ 200 ಮೀಟರ್ ಬ್ರೆಸ್ಟ್ ಸ್ಟ್ರೋಕ್ ಪ್ರಥಮ, 200 ಮೀಟರ್ ಫ್ರೀಸ್ಟೈಲ್ ಪ್ರಥಮ ಸ್ಥಾನ ವನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಅವರ ಸಾಧನೆಯನ್ನು ಶ್ಲಾಘಿಸಿ ಕಾಲೇಜಿನ ಅಧ್ಯಕ್ಷ ಡಾ.ಎಸ್. ಲೋಕೇಶ್, ಕಾರ್ಯದರ್ಶಿ ಶ್ವೇತ ಲೋಕೇಶ್, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಚುನಾವಣಾ ಆಯುಕ್ತರಿಂದಲೇ ಮತಗಳ್ಳರ ರಕ್ಷಣೆ

» ಮೊದಲನೇ ಪುಟದಿಂದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಪ್ರೀತಿಸುತ್ತೇನೆ. ಅದನ್ನು ರಕ್ಷಿಸಲು ಕೆಲಸ ಮಾಡುತ್ತಿದ್ದೇನೆಂದು ಪ್ರತಿಪಾದಿಸಿದ್ದಾರೆ.

**ಆರೋಪ ತಳ್ಳಿ ಹಾಕಿದ ಆಯೋಗ:** ಆಳಂದ ಕ್ಷೇತ್ರದ ಮತಗಳ್ಳರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸಿದ್ದಾರೆಂಬ ರಾಹುಲ್ ಗಾಂಧಿ ಆರೋಪವನ್ನು ಕೇಂದ್ರ ಚುನಾವಣಾ ಆಯೋಗ ತಳ್ಳಿಹಾಕಿದೆ. ಈ ಆರೋಪಗಳೆಲ್ಲ ಸುಳ್ಳು ಮತ್ತು ಆಧಾರ ರಹಿತ ಎಂದು ಹೇಳಿದೆ. ರಾಹುಲ್ ಗಾಂಧಿ ತಪ್ಪು ಕಲ್ಪನೆ ಮಾಡಿಕೊಂಡಿರುವಂತೆ ಸಾರ್ವಜನಿಕರು ಆನ್‌ಲೈನ್‌ನಲ್ಲಿ ವ್ಯಕ್ತಿಯ ಹೆಸರನ್ನು ಮತದಾ ರರ ಪಟ್ಟಿಯಿಂದ ಅಳಿಸಲು ಸಾಧ್ಯವಿಲ್ಲ. 2023ರ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಕೆಲವು ಮತದಾರರ ಹೆಸರುಗಳನ್ನು ಅಳಿಸಲು ಕೆಲವು ವಿಫಲ ಪ್ರಯತ್ನಗಳು ನಡೆದವು. ಈ ಬಗ್ಗೆ ತನಿಖೆ ನಡೆಸಲು ಚುನಾವಣಾ ಆಯೋಗದಿಂದಲೇ ಪ್ರಕರಣ ದಾಖಲಿಸಲಾಗಿತ್ತು ಎಂದು ಆಯೋಗ ಹೇಳಿದೆ. 2018ರಲ್ಲಿ ಸುಭಾಷ್ ಗುತ್ತೇದಾರ್ (ಬಿಜೆಪಿ) ಮತ್ತು 2023ರಲ್ಲಿ ಬಿ.ಆರ್. ಪಾಟೀಲ್ (ಕಾಂಗ್ರೆಸ್) ಆಳಂದ ವಿಧಾನ ಸಭಾ ಕ್ಷೇತ್ರದಿಂದ ಗೆದ್ದಿದ್ದಾರೆ. ಪ್ರಾಸಂಗಿಕವಾಗಿ ಕರ್ನಾಟಕ ಸಿಐಡಿ ಮತ್ತು ಕರ್ನಾ ಟಕದ ಮುಖ್ಯ ಚುನಾವಣಾ ಅಧಿಕಾರಿ ಪದೇ ಪದೇ ಕೇಳುತ್ತಿ ದ್ದರೂ ಸಹ, ಆಳಂದದಲ್ಲಿ ಮತದಾರರ ಪಟ್ಟಿಯಿಂದ ಮತದಾರರ ಹೆಸರನ್ನು ಅಳಿಸುವ ಪ್ರಯತ್ನಗಳ ಕುರಿತು ಮಾಹಿತಿ ಹಂಚಿ ಕೊಂಡಿಲ್ಲವೆಂಬ ಆರೋಪಗಳಿಗೆ ಚುನಾವಣಾ ಆಯೋಗವು ಯಾವ ಪ್ರತಿಕ್ರಿಯೆ ನೀಡಿಲ್ಲ.

## ರಾಜಾಜಿನಗರದಲ್ಲಿ ಮದ್ಯದಂಗಡಿ ಬೇಡ: ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ನಗರದ ಚಿಕ್ಕಹೊನ್ನೇನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ರಾಜಾಜಿನಗರ ವೃತ್ತದಲ್ಲಿ ಮದ್ಯದಂಗಡಿ ತೆರೆಯಲು ಅನುಮತಿ ನೀಡಬಾರದೆಂದು ನಿವಾಸಿಗಳು ಅಹೋರಾತ್ರಿ ಪ್ರತಿಭಟನೆ ನಡೆಸಿದರು.

ಬಡಾವಣೆಯಲ್ಲಿ ಈಗಾಗಲೇ ನೂರಾರು ಮನೆಗಳು ನಿರ್ಮಾಣವಾಗಿದ್ದು, ಅನೇಕ ಕಟ್ಟಡ ಕಾಮಗಾರಿಗಳು ನಡೆಯುತ್ತಿವೆ. ಬಡಾವಣೆಗೆ ಹೊಂದಿಕೊಂಡಿರುವ ವೃತ್ತ ದಿಂದ ದೊಡ್ಡಕೊಂಡಗೊಳ, ಯಡಿಯೂರು, ದಾಸರ ಕೊಪ್ಪಲು, ಹರಳಹಳ್ಳಿ ಹಾಗು ನಗರಕ್ಕೆ ಸಂಪರ್ಕಿಸುವ ಮುಖ್ಯ ರಸ್ತೆಯಾಗಿದೆ. ಇಲ್ಲಿ ನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು ನಿತ್ಯ ಸಂಚರಿಸುವ ಮಾರ್ಗವಾಗಿದ್ದು, ಇಲ್ಲಿ ಮದ್ಯದಂಗಡಿಗೆ ಅನುಮತಿ ನೀಡಿದರೆ ಶಾಂತಿಗೆ ಭಂಗವಾಗುತ್ತದೆ ಮಹಿಳೆಯರು ದೂರಿದರು.

ಜನವಸತಿ ಪ್ರದೇಶದಲ್ಲಿ ಮದ್ಯದಂಗಡಿ ತೆರೆಯಬಾರದೆಂದು ನ್ಯಾಯಾಲಯದ ಆದೇಶವಿದೆ. ಆದರೂ ಅಬಕಾರಿ ಇಲಾಖೆ ಅಧಿಕಾರಿಗಳು ಪ್ರಭಾವಿಗಳ ಒತ್ತಡಕ್ಕೆ ಮಣಿದು ಅವಕಾಶ ಕಲ್ಪಿಸಿದ್ದಾರೆ. ಬಾರ್ ಅನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಕಟ್ಟಡ ಮಾಲೀಕರು ಹಾಗು ಬಾರ್ ನಡೆಸಲು ಪರವಾನಗಿ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ರಾಜಾಜಿನಗರ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬಸವನಾಯಕ್, ಲಿಂಗರಾಜು, ಪುಟ್ಟನಾಯಕ, ಬೀರೇಗೌಡ, ಜಯಕುಮಾರ್ ಮತ್ತಿತರರಿದ್ದರು.

## ಹುಲ್ಕೋಡಿನಲ್ಲಿ ಕಾಡಾನೆಗಳ ಹಿಂಡು : ಆತಂಕ



• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲ್ಕೋಡಿನಲ್ಲಿ ಕಾಡಾನೆಗಳ ಹಿಂಡು ಬೀಡು ಬಿಟ್ಟಿದ್ದು, ಬೆಳೆಗಾರರು ಆತಂಕದಲ್ಲೇ ದಿನ ದೂಡುವಂತಾಗಿದೆ. ಕಾಡಾನೆಗಳನ್ನು ಓಡಿಸಿದರೂ ಸಹ ಪದೇ ಪದೇ ತೋಟಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಬೆಳೆಗಾರರು ಬೇಸತ್ತು ಹೋಗಿದ್ದಾರೆ.

ಹುಲ್ಕೋಡು ಗ್ರಾಮದ ಕಾಫಿ ತೋಟದ ಮಾಲೀಕ ಹಸೇನ್ ಅವರು ಮಾತನಾಡಿ, 15–20 ಆನೆಗಳು ನಮ್ಮ ತೋಟದಲ್ಲಿ ಕಂಡು ಬಂದಿದ್ದು, ಅಪಾರ ಪ್ರಮಾಣದ ಬೆಳೆ ನಷ್ಟ ಮಾಡಿವೆ. ಫಸಲಿಗೆ ಬಂದಿರುವ ಮೆಣಸು, ಕಾಫಿ, ಅಡಿಕೆ, ತೆಂಗು ಬೆಳೆ ನಾಶವಾಗಿದೆ. ಬೆಳೆ ನಷ್ಟಕ್ಕೆ ಅಲ್ಪ ಸ್ವಲ್ಪ ಪರಿಹಾರ ನೀಡುವುದರ ಮೂಲಕ ಅರಣ್ಯ ಇಲಾಖೆ ಕೈತೊಳೆದುಕೊಳ್ಳುತ್ತದೆ ಎಂದು ಆರೋಪಿಸಿದರು.

ಒಂದು ಕಾಫಿ ಗಿಡ ಫಸಲಿಗೆ ಬರಬೇಕಾದರೆ ಹಲವು ವರ್ಷಗಳು ಕಾಪಾಡಬೇಕಾಗಿದೆ. ಕಾಡಾನೆಗಳ ಹಿಂಡಿನಿಂದ 5 ಎಕರೆಯಷ್ಟು ಬೆಳೆ ಸಂಪೂರ್ಣ ಹಾಳಾಗಿದೆ. ಅಂದಾಜು 40 ವರ್ಷಗಳಷ್ಟು ಹಳೆಯದಾದ ಕಾಫಿ ಗಿಡಗಳನ್ನು ಕಾಡಾನೆಗಳು ಮುರಿದು ಹಾಕಿವೆ. ಕಾಡಾನೆಗಳಿಗೆ ಹೆದರಿ ಕಾರ್ಮಿಕರು ತೋಟಗಳಿಗೆ ಬರಲು ಭಯಪಡುತ್ತಿದ್ದಾರೆ. ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರ ಮಾಡಬೇಕೆಂದು ಆಗ್ರಹಿಸಿದರು. ಗ್ರಾಮಸ್ಥರಾದ ರಿಚರ್ಡ್, ಬಾಬಣ್ಣ ಇತರರಿದ್ದರು.

## ಗಂಡಸಿ: 7 ಸಿಂದಿ ಕರುಗಳ ರಕ್ಷಣೆ

• ಪ್ರಜೋದಯ ವರದಿ

**ಅರಸೀಕೆರೆ:** ಕಾನೂನು ಬಾಹಿರವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಒಬ್ಬನನ್ನು ಬಂಧಿಸಿರುವ ಪೊಲೀಸರು 7 ಸಿಂದಿ ಹಸುವಿನ ಕರುಗಳನ್ನು ರಕ್ಷಿಸಿದ್ದಾರೆ. ರಾಮನಗರ ಜಿಲ್ಲೆ ಚಿಕ್ಕನಹಳ್ಳಿ ಗ್ರಾಮದ ಮಹಮ್ಮದ್ ರಫೀಕ್ ಬಂಧಿತ. ಗಂಡಸಿ ಗ್ರಾಮದ ಅಪ್ಪಯ್ಯ ಹಾಗು ರಾಮಗರ ಜಿಲ್ಲೆ ಲಾಯ ಗ್ರಾಮದ ಅಹಮ್ಮದ್ ಪಾಷ ಎಂಬುವವರು ತಪ್ಪಿಸಿಕೊಂಡಿದ್ದಾರೆ.

ತಾಲ್ಲೂಕಿನ ಹುರುಗಿಲವಾಡಿ ಗ್ರಾಮದ ಪ್ರದೀಪ ಎಂಬುವವರ ಮನೆಯ ಸಮೀಪದಲ್ಲಿರುವ ಖಾಲಿ ಜಾಗದಲ್ಲಿ ಸಿಂದಿ ಹಸುವಿನ ಕರುಗಳನ್ನು ಕಟ್ಟಿಹಾಕಿದ್ದ ದುಷ್ಕರ್ಮಿಗಳು ಅವುಗಳ ಹತ್ಯೆ ಉದ್ದೇಶದಿಂದ ವಾಹನದಲ್ಲಿ ಸಾಗಾಟ ಮಾಡುತ್ತಿದ್ದರೆಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ಪೊಲೀಸರು ಭೇಟಿ ನೀಡಿದಾಗಲೇ ಜಾನುವಾರುಗಳನ್ನು ಸ್ಕಾರ್ಪಿಯೋ ಹಾಗು ಓಮಿನಿ ವಾಹನಗಳಿಗೆ ತುಂಬುತ್ತಿರುವುದು ಕಂಡಿದೆ. ಪೊಲೀಸರು ಬರುತ್ತಿದ್ದಂತೆ ಇಬ್ಬರೂ ನಾಪತ್ತೆಯಾಗಿದ್ದು ವ್ಯಾಪಾರಿ ಮಹಮ್ಮದ್ ರಫೀಕ್ ಸಿಕ್ಕಿಬಿದ್ದಿದ್ದಾನೆ.

# ಲಾಭದ ಹಾದಿಯಲ್ಲಿ ಪಿಕಾರ್ಡ್ ಬ್ಯಾಂಕ್

• ಪ್ರಜೋದಯ ವರದಿ



**ಸಕಲೇಶಪುರ:** ನಷ್ಟದಲ್ಲಿದ್ದ ಪಿಕಾರ್ಡ್ ಬ್ಯಾಂಕ್ ಇದೀಗ ಲಾಭದ ಹಾದಿಯಲ್ಲಿ ಬರುತ್ತಿದೆ ಎಂದು ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ವೈ.ಪಿ. ರಾಜೇಗೌಡ ಅವರು ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸುಮಾರು 7 ಕೋಟಿಯಷ್ಟು ನಷ್ಟದಲ್ಲಿದ್ದ ಬ್ಯಾಂಕ್ ಇದೀಗ ಹಿಂದಿನ ಅಧ್ಯಕ್ಷರು, ನಿರ್ದೇಶಕರು ಹಾಗು ಇಂದಿನ ನಿರ್ದೇಶಕರ ಶ್ರಮದಿಂದ ನಷ್ಟದ ಪ್ರಮಾಣವು ಸಂಪೂರ್ಣವಾಗಿ ತಗ್ಗಿ 39 ಲಕ್ಷ ರೂಪಾಯಿಗಳಷ್ಟಾಗಿದೆ. ಅದನ್ನು ಸಹ ಮುಂದಿನ ದಿನಗಳಲ್ಲಿ ಸರಿತೂಗಿಸಿ ಲಾಭದ ಹಾದಿಗೆ ತರಲಾಗುವುದು ಎಂದರು.

ಬ್ಯಾಂಕಿನಲ್ಲಿ 5,046 ಶೇರು ದಾರರಿದ್ದು, ಕೆಲವು ವರ್ಷಗಳಿಂದ ಬ್ಯಾಂಕ್ ನಷ್ಟದಲ್ಲಿದ್ದ ಕಾರಣ ಸಾಲ ವನ್ನು ಕೊಡಲಾಗುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಲಾಭದತ್ತ ದಾಪು ಗಾಲು ಇಡುತ್ತಿರುವುದರಿಂದ ಇವತ್ತು ಐದು ಜನರಿಗೆ ಸಾಂಕೇತಿಕವಾಗಿ ಸಾಲ ದೃಢೀಕರಣ ಪತ್ರವನ್ನು ನೀಡಿ ಮತ್ತೆ ಸಾಲ ವಿತರಣೆಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಷೇರುದಾರರಿಗೂ ಲಾಭ ನೀಡಲಾಗುವುದೆಂದು ತಿಳಿಸಿದರು.

ಬ್ಯಾಂಕಿನಿಂದ ಹಣ ಪಡೆದು ಅಕಾಲಿಕ ಮರಣ ಹೊಂದಿದವರಿಂದ ಸಾಲ ವಸೂಲಿ ಕಷ್ಟವಾಗು ತ್ತಿರುವುದರಿಂದ ಅಕ್ಟೋಬರ್ ತಿಂಗಳಿಂದ ವಿಮೆ ಯೋಜನೆಯನ್ನು ಬ್ಯಾಂಕ್ ವತಿಯಿಂದ ಜಾರಿಗೆ ತರಲಾಗುವುದು. ಯಶಸ್ವಿನಿ ಕಾರ್ಡ್ ಯೋಜನೆ 850 ಜನರಿಗೆ ಲಭ್ಯವಿದ್ದರೆ, ಮುಂದಿನ ದಿನಗಳಲ್ಲಿ ಅದನ್ನು 1,400 ಜನರಿಗೆ ವಿಸ್ತರಿಸಲಾಗುವುದು. ಸ್ವ-ಸಹಾಯ ಸಂಘಗಳಿಗೂ ಸಾಲ ನೀಡುವ ಯೋಜನೆಯನ್ನು ಬ್ಯಾಂಕ್ ಜಾರಿಗೆ ತರಲಿದೆ. ಈ ನಿಟ್ಟಿನಲ್ಲಿ ಈಗಾಗಲೇ ಒಂದು ಸ್ವ-ಸಹಾಯ ಸಂಘಕ್ಕೆ ಸಾಲ ವಿತರಿಸುವ ಮೂಲಕ ಚಾಲನೆ ನೀಡಲಾಗಿದೆ ಎಂದರು.

ಷೇರುದಾರರು ಬ್ಯಾಂಕ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಫಿಕ್ಸ್‌ಡ್ ಡೆಪಾಸಿಟ್ ಇಟ್ಟಲ್ಲಿ ಬ್ಯಾಂಕ್ ಹೆಚ್ಚು ಲಾಭ ಗಳಿಸಲು ಸಾಧ್ಯವಾಗುತ್ತದೆ. ಬ್ಯಾಂಕಿನ ಹಣವನ್ನು ದುರುಪಯೋಗ ಮಾಡಿದ ಇಬ್ಬರಿಂದ ಕಾನೂನು ಕ್ರಮದ ಮೂಲಕ ಹಣವನ್ನು ವಾಪಸು ಪಡೆಯಲಾಗಿದೆ ಎಂದು ಹೇಳಿದರು.

ಮೊದಲ ಬಾರಿಗೆ ಬ್ಯಾಂಕ್ ಲಾಭದತ್ತ ಹೆಜ್ಜೆ ಹಾಕುತ್ತಿರುವುದರಿಂದ, ಷೇರುದಾರರು ಬ್ಯಾಂಕ್ ಮೇಲೆ ಇಟ್ಟಿರುವ ಭರವಸೆಗೆ ನಾವು ಎಲ್ಲರೂ ಪ್ರಾಮಾಣಿಕವಾಗಿ, ಪಕ್ಷಭೇದ ಮರೆತು ಬ್ಯಾಂಕ್ ಏಳಿಗೆಗೆ ಕೆಲಸ ಮಾಡುತ್ತೇವೆ. ಬ್ಯಾಂಕಿನ ಅಭಿವೃದ್ಧಿ ದೃಷ್ಟಿಯಿಂದ ಷೇರುದಾರರೂ ಬ್ಯಾಂಕ್ ಜೊತೆ ಉತ್ತಮ ವ್ಯವಹಾರ ನಡೆಸಿ ಬ್ಯಾಂಕ್‌ನ್ನು ಉಳಿಸಿ ಬೆಳೆಸಬೇಕೆಂದು ತಿಳಿಸಿದರು.

2025–26ನೇ ಸಾಲಿಗೆ ಲೆಕ್ಕಪರಿಶೋಧಕರಾಗಿ ಹರೀಶ್‌ಗೌಡ ಅವರನ್ನು ಆಯ್ಕೆ ಮಾಡ ಲಾಯಿತು. ಹಿಂದಿನ ಸಾಲಿನಲ್ಲಿ 21 ದಿನಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಕೆ.ಪಿ.ಕೃಷ್ಣೇಗೌಡ ಅವರನ್ನು ಸನ್ಮಾನಿಸಲಾಯಿತು.

ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷ ವೀರೇಶ್ ವಳಲಹಳ್ಳಿ, ನಿರ್ದೇಶಕರಾದ ಎ.ಬಿ.ಪ್ರೇಮ್ ಕುಮಾರ್ ದೇವಿಹಳ್ಳಿ, ಹೆಚ್.ಹೆಚ್. ಉದಯ್, ಲೋಕೇಶ್, ಮನೋಜ್ ಕುಮಾರ್, ವನಿತಾ ಹೆತ್ತೂರು, ಮಂಜುಳ ಮೂಗಲಿ, ಕೆ.ಬಿ.ಜಯರಾಜು ಕಾಮನಹಳ್ಳಿ, ನಾಗರಾಜು ಲಕ್ಕುಂದ, ಬಿ.ಬಿ.ವೆದುನಂದನ್ ಆಚಂಗಿ, ಲೀಲಾವತಿ ಹಾನುಬಾಳು, ಉದಯಕುಮಾರ್ ಹೆಗ್ಗದ್ದೆ, ಹಿತೈಷಿ ದೊಡ್ಡನಾಗರ ಹಾಜರಿದ್ದರು.

## ಚಿನ್ನಾಭರಣ ಕಳವು

**ಹಾಸನ:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿ ಕೊಂಡು ಬಾಗಿಲುಮುರಿದು ಒಳನುಗ್ಗಿರುವ ಕಳ್ಳರು 4.87 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಚನ್ನ ಪಟ್ಟಣದ ಕೆಎಂಎಫ್ ವಸತಿ ಗೃಹದಲ್ಲಿ ನಡೆದಿದೆ.

ನಿವಾಸಿ ಪವಿತ್ರ ಅವರು ಸೆ.16 ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತ ತವರೂರಿಗೆ ತೆರಳಿದ್ದರು. 3ನೇ ದಿನ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಮುಂಬಾಗಿಲನ್ನು ಬಲವಾದ ಆಯುಧದಿಂದ ಮೀಟಿ ಮುರಿದಿರುವ ಕಳ್ಳರು ದಿವಾನ್ ಕಾಟ್ ಕೆಳಗಡೆ ಕ್ಯಾಬಿನ್‌ನ ಬ್ಯಾಗ್‌ನಲ್ಲಿಟ್ಟಿದ್ದ 14 ಗ್ರಾಂ ತೂಕದ ಚಿನ್ನದ ನೆಕ್ಲೆಸ್, 24 ಗ್ರಾಂ 500 ಮಿಲಿ ಗ್ರಾಂ ತೂಕದ ಚಿನ್ನದ ನೆಕ್ಲೆಸ್, 6 ಗ್ರಾಂ ತೂಕದ ಚಿನ್ನದ ಚೈನ್, 12 ಗ್ರಾಂ ತೂಕದ ಚಿನ್ನದ ಖಡ್ಗ, 20 ಗ್ರಾಂ ತೂಕದ ಚಿನ್ನದ ಬಳೆ, 3 ಗ್ರಾಂ ತೂಕದ ಚಿನ್ನದ ಉಂಗುರ, 10 ಗ್ರಾಂ ತೂಕದ ಚಿನ್ನದ ಓಲೆ, 2 ಗ್ರಾಂ ತೂಕದ ಚಿನ್ನದ ಉಂಗುರ, 6 ಗ್ರಾಂ ತೂಕದ ಚಿನ್ನದ ಓಲೆ ಕದ್ದಿದ್ದಾರೆ. ಕಳುವಾದ ಚಿನ್ನಾಭರಣಗಳ ಒಟ್ಟು ಮೌಲ್ಯದ 4,87,500 ರೂ. ಬೆಲೆ ಬಾಳುವ ಚಿನ್ನಾಭರಣ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೆ.20ಕ್ಕೆ ಸುತ್ತೂರು ಶ್ರೀಗಳ 110ನೇ ಜಯಂತ್ಯುತ್ಸವ




• ಪ್ರಜೋದಯ ವರದಿ

**ಸಕಲೇಶಪುರ:** ಸುತ್ತೂರು ಮಠದ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸ 110ನೇ ಜಯಂತಿಯನ್ನು ಸೆ.20ರ ಶನಿವಾರ ಪಟ್ಟಣದ ಶ್ರೀ ಬ್ಯಾಕರವಳ್ಳಿ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ ಆಚರಿಸಲಾಗುತ್ತಿದೆಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಂ.ಎಸ್. ಧರ್ಮಪ್ಪ ಮೂಗಲಿಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಶನಿವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಸಕಲೇಶ್ವರ ಸ್ವಾಮಿ ದೇವಾಲಯದಿಂದ ಕಲ್ಯಾಣ ಮಂಟಪದವರೆಗೆ ಸ್ವಾಮೀಜಿ ಅವರ ಭಾವಚಿತ್ರ ಮೆರವಣಿಗೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಅಧೀಕ್ಷಕ ಮಂಜುನಾಥ್ ಅವರು ಮಾತನಾಡಿ, ಜಯಂತಿ ಅಂಗವಾಗಿ ಕ್ರಾಫರ್ಡ್ ಆಸ್ಪತ್ರೆಯ ರೋಗಿಗಳಿಗೆ ಹಾಗು ಕೌಡಳ್ಳಿಯ ಎನ್.ಕೆ.ಗಣಪಯ್ಯ ಕಿವುಡು ಮತ್ತು ಮೂಗ ಮಕ್ಕಳ ಶಾಲೆಗೆ ಹಣ್ಣುಹಂಪಲು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೆಂದರು.

ಮೇಲಣಗವಿ ಶಿರಸಿಂಹಾಸನ ಸಂಸ್ಥಾನ ಮಠ ಶಿವಗಂಗಾ ಕ್ಷೇತ್ರದ ಡಾ.ಶ್ರೀ ಮಲೆಯ ಶಾಂತ ಮುನಿ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದು, ಶಾಸಕ ಸಿಮೆಂಟ್ ಮಂಜು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಂ.ಎಸ್. ಧರ್ಮಪ್ಪ ಮೂಗಲಿ ವಹಿಸಲಿದ್ದಾರೆಂದರು. ಜೆಎಸ್‌ಎಸ್ ಬಿಇಡಿ ಕಾಲೇಜಿನ ಪ್ರಾಂಶುಪಾಲ ನಂಜುಂಡಪ್ಪ, ಕಾಲೇಜು ಅಧೀಕ್ಷಕ ಮಂಜುನಾಥ್ ಇತರರು ಉಪಸ್ಥಿತರಿದ್ದರು.

## ಏಷ್ಯಾ ಕಪ್: ಇಂದು ಭಾರತ-ಒಮಾನ್ ಪಂದ್ಯ

• ಪ್ರಜೋದಯ ವರದಿ

**ದುಬೈ:** ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿ ರುವ ಎರಡೂ ಪಂದ್ಯಗಳನ್ನು ಗೆಲ್ಲುವ ಮೂಲಕ ಎ ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ತಂಡ ನಾಳೆ (ಶುಕ್ರವಾರ) ಒಮಾನ್ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದರೆ ಮೊದಲು ಬ್ಯಾಟಿಂಗ್ ತೆಗೆದುಕೊಂಡು ಸಂಪೂರ್ಣ 20 ಓವರ್ ಬ್ಯಾಟಿಂಗ್ ನಡೆಸಲು ಭಾರತ ಎದುರು ನೋಡುತ್ತಿದೆ.

**ಭಾರತ ತಂಡ:** ಸೂರ್ಯಕುಮಾರ್ ಯಾದವ್ (ನಾಯಕ) ಶುಭ್‌ಮನ್ ಗಿಲ್, ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಶಿವಂದುಬೆ, ಜಿತೇಶ್ ಶರ್ಮಾ, ಅಕ್ಷರ್ ಪಟೇಲ್, ಜಸ್ಪ್ರೀತ್ ಬುಮ್ರಾ, ವರುಣ್ ಚಕ್ರವರ್ತಿ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ರಿಂಕು ಸಿಂಗ್.

**ಒಮಾನ್ ತಂಡ:** ಜತೀಂದರ್ ಸಿಂಗ್ (ನಾಯಕ), ಹಮ್ಮದ್ ಮಿರ್ಜಾ, ವಿನಾಯಕ್ ಶುಕ್ಲಾ, ಸೂಫಿಯಾನ್ ಯೂಸೂಫ್, ಆಶಿಶ್ ಒಡೆದರಾ, ಅಮೀರ್ ಕಲೀಮ್, ಮೊಹಮ್ಮದ್ ನದೀಮ್, ಸುಫಿಯಾನ್ ಮೊಹಮ್ಮದ್, ಆರ್ಯನ್ ಬಿಶ್ತ್, ಕರಣ್ ಸೋನಾವಾಲೆ, ಜಿಕ್ರಿಯಾ ಇಸ್ಲಾಂ, ಸಮಯ್ ಶ್ರೀವತ್ಸ, ಹಸ್ನೇನ್ ಶಾ, ಶಾ ಫೈಸಲ್, ನದೀಮ್ ಖಾನ್, ವಸೀಂ ಅಲಿ.

# ವಿಶ್ವ ಜಾವೆಲಿನ್ ಥ್ರೋ: ನೀರಜ್ ಚೋಪ್ರಾಗೆ ನಿರಾಸೆ

• ಪ್ರಜೋದಯ ವರದಿ

**ಟೋಕಿಯೊ:** ಭಾರತದ ನೀರಜ್ ಚೋಪ್ರಾ ಅವರಿಗೆ ಸತತ ಎರಡನೇ ಬಾರಿ ವಿಶ್ವ ಚಾಂಪಿಯನ್ ಕಿರೀಟ ಧರಿಸುವ ಕನಸು ಗುರುವಾರ ಭಗ್ನವಾಯಿತು. ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ವಿಭಾಗದ ಜಾವೆಲಿನ್ ಥ್ರೋ ಫೈನಲ್‌ನಲ್ಲಿ ನೀರಜ್ ಚೋಪ್ರಾ ಎಂಟನೇ ಸ್ಥಾನ ಪಡೆದರು. ಭಾರತದವರೇ ಆದ ಯುವ ಅಥ್ಲೀಟ್ ಸಚಿನ್ ಯಾದವ್ ನಾಲ್ಕನೇ ಸ್ಥಾನ ಪಡೆದು ಅಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು.

ಟ್ರಿನಿಡಾಡ್ ಮತ್ತು ಟೊಬ್ಯಾಗೋದ ಕೆಶ್ರಾನ್ ವಾಲ್ಕಾಟ್ (88.16ಮೀ) ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಗ್ರೆನೆಡಾದ ಆ್ಯಂಡರ್ಸನ್ ಪೀಟರ್ (87.38ಮೀ) ಮತ್ತು ಕರ್ಟೀಸ್ ಥಾಂಪ್ಸನ್ (86.67ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು. ನೀರಜ್ ಅವರು 2021ರಲ್ಲಿ ಒಲಿಂಪಿಕ್ಸ್ ಚಿನ್ನ ಜಯಿಸಿದ್ದ ಇತಿಹಾಸ ನಿರ್ಮಿಸಿದ್ದ ಕ್ರೀಡಾಂಗಣ ಇದು. ಅವರಿಗೆ ಇಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಥ್ರೋ ದಾಖಲಿಸಲು ಕೂಡ ಆಗಲಿಲ್ಲ. ಅವರಿಂದ 84.03 ಮೀ ದೂರ ಥ್ರೋ ಮಾಡಲಷ್ಟೇ ಸಾಧ್ಯವಾಯಿತು.

ಸ್ಪರ್ಧಾ ಕಣದಲ್ಲಿದ್ದ 12 ಅಥ್ಲೀಟ್‌ಗಳಿಗೆ ತಲಾ ಐದು ಥ್ರೋ ಅವಕಾಶಗಳನ್ನು ನೀಡಲಾಗಿತ್ತು. ಅದರಲ್ಲಿ ಮೊದಲ ಆರು ಸ್ಥಾನ ಪಡೆದವರಿಗೆ ಆರನೇ ಥ್ರೋ ಅವಕಾಶ ನೀಡಲಾಯಿತು.




ಅಚ್ಚರಿಯೆಂದರೆ ಈ ಸುತ್ತಿಗೆ ಭಾರತದ ಯುವ ಅಥ್ಲೀಟ್ ಸಚಿನ್ ಯಾದವ್ ಅರ್ಹತೆ ಪಡೆದರು. ಪ್ರಥಮ ಥ್ರೋನಲ್ಲಿಯೇ 86.27 ಮೀಟರ್ಸ್ ದೂರ ಥ್ರೋ ಮಾಡಿ ನಾಲ್ಕನೇ ಸ್ಥಾನ ಪಡೆದರು. ಸಚಿನ್ ಅವರು ಚೋಪ್ರಾ, ಜರ್ಮನಿಯ ತಾರೆ ಜೂಲಿಯನ್ ವೆಬರ್ (86.11ಮೀ) ಮತ್ತು ಅರ್ಷದ್ (82.75 ಮೀ) ಅವರಿಗಿಂತ ಉತ್ತಮವಾಗಿ ಥ್ರೋಗಳನ್ನು ನಿರ್ವಹಿಸಿದರು. ಕಳೆದ ಬಾರಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಚೋಪ್ರಾ ಚಿನ್ನ ಮತ್ತು ನದೀಂ ಬೆಳ್ಳಿ ಜಯಿಸಿದ್ದರು.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿರುವ ಚೋಪ್ರಾ ಅವರು ತಮ್ಮ ಮೊದಲ ಪ್ರಯತ್ನ ದಲ್ಲಿ 83.65ಮೀಟರ್ಸ್ ಥ್ರೋ ಮಾಡಿ, ಐದನೇ ಸ್ಥಾನ ಪಡೆದರು. ಎರಡನೇ ಅವಕಾಶದಲ್ಲಿ ಸುಧಾರಿತ ಪ್ರದರ್ಶನ ನೀಡಿದ ಅವರು 84.03 ಮೀ ಥ್ರೋ ಮಾಡಿದರು. ಆದರೆ ಮೂರನೇ ಅವಕಾಶದಲ್ಲಿ ಫೌಲ್ ಮಾಡಿದರು. ಅದರಿಂದಾಗಿ ಎಂಟನೇ ಸ್ಥಾನಕ್ಕೆ ಕುಸಿದರು. ನಂತರದ ಭಾಗದುದ್ದಕ್ಕೂ ಅವರು ಇದೇ ಸ್ಥಾನದಲ್ಲಿ ಮುಂದುವರಿದರು.

ಅವರ ನಾಲ್ಕನೇ ಥ್ರೋ 82.86ಮೀ ದೂರ ಎಸೆದರು. ಕೀನ್ಯಾದ ಜೂಲಿಯಸ್ ಯೆಗೊ ಅವರು 85.54 ಮೀ ದೂರ ಥ್ರೋ ಮಾಡಿದರು. ಐದನೇ ಅವಕಾಶದಲ್ಲಿ ನೀರಜ್ ಅವರು ಫೌಲ್ ಆಗುವುದರೊಂದಿಗೆ ನಿರಾಶೆಯಲ್ಲಿ ಮುಳುಗಿದರು. ತಮ್ಮ ಸೊಂಟದ ಬೆಲ್ಟ್ ತೆಗೆದು ಮುಖ ಮುಚ್ಚಿಕೊಂಡರು. ಸ್ಥಿರ ಪ್ರದರ್ಶನಕ್ಕೆ ಹೆಸರಾಗಿರುವ ಚೋಪ್ರಾ ಅವರು ಇಲ್ಲಿ 85 ಮೀ ಹಂತವನ್ನೂ ದಾಟಲಿಲ್ಲ. ಹೋದ ವರ್ಷದ ಮೇ ತಿಂಗಳಲ್ಲಿ ನಡೆದಿದ್ದ ಫೆಡರೇಷನ್ ಕಪ್ ಅಥ್ಲೆಟಿಕ್‌ನಲ್ಲಿ ಅವರು ಚಿನ್ನ ಗೆದ್ದಿದ್ದರು. ಆ ಸ್ಪರ್ಧೆಯಲ್ಲಿ ಅವರು 82.27 ಮೀ ಥ್ರೋ ಮಾಡಿದ್ದು ಇಲ್ಲಿಯವರೆಗಿನ ಕನಿಷ್ಠ ದಾಖಲೆಯಾಗಿತ್ತು.

ಮೇ ತಿಂಗಳಲ್ಲಿ ದೋಹಾ ಡೈಮಂಡ್ ಲೀಗ್‌ನಲ್ಲಿ ಅವರು 90.23 ಮೀ ದೂರ ಸಾಧನೆಯನ್ನು ಜಾವೆಲಿನ್ ಥ್ರೋ ದಿಗ್ಗಜ ಯಾನ್ ಝೆಲೆಗ್ನಿ ಅವರ ಮಾರ್ಗದರ್ಶನದಲ್ಲಿ ಚೋಪ್ರಾ ಮಾಡಿ ದ್ದರು.

## ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ : ಎಂಟರ ಘಟ್ಟಕ್ಕೆ ಸಿಂಧು



• ಪ್ರಜೋದಯ ವರದಿ

**ಶೆಂಜೆನ್ (ಚೀನಾ):** ಭಾರತದ ಅಗ್ರ ಸಿಂಗಲ್ಸ್ ಆಟಗಾರ್ತಿ ಪಿ.ವಿ.ಸಿಂಧು ಅವರು ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಪೊರ್ನ್‌ಪೊವಿ ಚೊಚುವಾಂಗ್ ಅವರನ್ನು ಗುರುವಾರ ನೇರ ಗೇಮ್‌ಗಳಿಂದ ಸೋಲಿಸಿ ಕ್ವಾರ್ಟರ್ ಫೈನಲ್ ತಲುಪಿದರು.

ಪುರುಷರ ಡಬಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್–ರಣಕಿರೆಡ್ಡಿ ಚಿರಾಗ್ ಶೆಟ್ಟಿ ಜೋಡಿ ಸಹ ನೇರ ಗೇಮ್‌ಗಳ ಗೆಲುವಿನೊಡನೆ ಎಂಟರ ಘಟ್ಟಕ್ಕೆ ಮುನ್ನಡೆಯಿತು.

ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿರುವ ಸಿಂಧು 21–15, 21–15 ರಿಂದ ಥಾಯ್ಲೆಂಡ್‌ನ ಆಟಗಾರ್ತಿಯನ್ನು 41 ನಿಮಿಷಗಳಲ್ಲಿ ಸೋಲಿಸಿದರು. ಈ ಗೆಲುವಿನಿಂದ ಸಿಂಧು ಅವರು ಚೊಚುವಾಂಗ್ ವಿರುದ್ಧ ಗೆಲುವಿನ ದಾಖಲೆಯನ್ನು 7–5ಕ್ಕೆ ಸುಧಾರಿಸಿದರು.

ಸಿಂಧು ಅವರು ಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಆ್ಯನ್ ಸೆಯಂಗ್ ಅವರನ್ನು ಎದುರಿಸಲಿದ್ದಾರೆ. ದಕ್ಷಿಣ ಕೊರಿಯಾದ ಆ್ಯನ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಅವರನ್ನು 23–21, 21–14 ರಿಂದ ಹಿಮ್ಮೆಟ್ಟಿಸಿದರು.

ಹಾಂಗ್‌ಕಾಂಗ್ ಓಪನ್‌ನಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಸಿಂಧು ಇಲ್ಲಿ ನೇರ ಸೆಟ್‌ಗಳ ಗೆಲುವಿಗೆ ಸಂತಸಗೊಂಡಿದ್ದರು. ಗೆಲುವಿನಿಂದ ಸಂತಸವಾಗಿದೆ. ಆರಂಭದಿಂದಲೇ ಎಚ್ಚರಿಕೆ ವಹಿಸಿ ಶೇ.100ರಷ್ಟು ಆಟ ನೀಡುವುದು ಮುಖ್ಯವಾಗಿತ್ತು. ಆಕೆ ಉನ್ನತ ಆಟಗಾರ್ತಿ. ಮೊದಲ ಗೇಮ್ ಗೆದ್ದ ನಂತರ ನಾನು ಎರಡನೇ ಗೇಮ್‌ನಲ್ಲಿ ಎಚ್ಚರಿಕೆ ವಹಿಸಿದೆ ಎಂದು ಸಿಂಧು ಪ್ರತಿಕ್ರಿಯಿಸಿದರು.

ಸಿಂಧು ಅವರು ಪ್ರಸ್ತುತ ಇಂಡೊನೇಷ್ಯಾದ ಮಾಜಿ ಸಿಂಗಲ್ಸ್ ಕೋಚ್ ಇರ್ವಾನ್ಸಿಯ ಅದಿ ಪ್ರಥಮ ಅವರಿಂದ ಮಾರ್ಗದರ್ಶನ ಪಡೆಯುತ್ತಿದ್ದಾರೆ. ದಿನದ ಕೊನೆಯಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿಚಿರಾಗ್ ಶೆಟ್ಟಿ ಜೋಡಿ 21–13, 21–12 ರಿಂದ ತೈವಾನ್‌ನ ಚಿಯು ಸಿಯಾಂಗ್ ಚಿವಾಂಗ್ ಚಿ ಲಿನ್ ಜೋಡಿಯನ್ನು 33 ನಿಮಿಷಗಳಲ್ಲಿ ಸೋಲಿಸಿ ಡಬಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK